MYSORE LAND REVENUE (AMENDMENT) BILL, 1969
INTRODUCTION

SRI H. V. KOUJALGI (Minister for Revenue) :—Sir, I beg to introduce :

" The Mysore Land Revenue (Amendment) :—Bill, 1969 "

Mr. Deputy Speaker :—The Bill is introduced.

MYSORE LEGISLATURE SALARIES (AMENDMENT) BILL, 1970

Introduction

MR. DEPUTY SPEAKER : Next introduction of the Mysore Legislature Salaries (Amendment) Bill, 1970.

† Sri M. NAGAPPA (RAICHUR) :—I am on a point of order. The Mysore Legislature Salaries (Amendment) Bill, 1970, cannot be introduced in the manner it is being introduced before this House now because in Clause 3 of the Bill " Deputy Chief Whip" has been defined In fact, the post of the " Deputy Chief Whip " is a creation by the Government and the power is invested with the Government to create such a post, Therefore, provision for such post and payment of salary for it cannot be done by way of amendment to the Mysore Legislature Salaries(Amendment) Bill. The Mysore Legislature Salaries Bill will come within the competence of this House only under certain provision of the Constitution. First of all, the principal Act comes under Article 195 and 186 of the Constitution. Art. 195 says.

> " Members of the Legislative Assembly and the Legislative Council of a State shall be entitled to receive such salaries and allowances as may from time to time be determined by the Legislature of the State by law and, until provision in that respect is so made, salaries and allowances at such rates and upon such condititions as were immediately before the commencement of this Constitution applicable in the case of members of the Legislative Assembly of the corresponding Province. "

This must be read with Art. 186.

MR. DEPUTY SPEAKER :—It is not proper to refer to all that at the tage of introduction.

SRI M. NAGAPPA :—I am on a point of order that the Bill cannot be introduced. It will not come within the competence of this House. I want the Chair to give a proper and considered ruling on my point of order. This is not a matter to be left to the vote of the House. I have raised this point of order under Rule 311 of the Rules of Procedure. I will quote that Rule. This Bill is against the provisions of the Constitution.

MR. DEPUTY SPEAKER :—To introduce a Bill, we have to observe certain formalities and all those formalities have been observed. This Bill has been published in the Gazette. It has Governor's recommendation.

SRI M. NAGAPPA: —Please bear with me. I shall be able to convince the House about my point. I am taking objection under Rule 311 which reads.

> "A point of order shall relate to the interpretation or enforcement of these rules or such articles of the Constitution as regulate the business of the Assembly and shall raise a question which is within the cognizance of the Speaker."

Therefore, I want an interpretation whether such a Bill can be introduced on the floor of this House,

Now I want to refer to Art. 186 which reads thus:

> "There shall be paid to the Speaker and the Deputy Speaker of the Legislative Assembly and to the Chairman and the Deputy Chairman of the Legislative Council, such salaries and allowances as may be respectively fixed by the Legislature of the State by law and, until provision in that behalf is so made, such salaries and allowances as are specified in the Secnd Schedule."

In the II and VII Schedule items 8 and 38 respectively relate to the salaries and allowances of the Speaker, the Deputy Speaker, the Chairman and Deputy Chairman of the Legislative Council and the members of the Legislature of the state: Therefore, the salaries and allowances of the Speaker, the Deputy Speaker and the members of this House have been created under the Constitution and a right for those salaries has been created and specified under the constitution. The posts of the Speaker and the Deputy Speaker are provided under the Constitution; their functions and duties are laid down under the Constitution; But this post of "Deputy Chief whip" is the creation of Government; it has no basis under the provisions of the Constitution. The Government may bring it in a different Bill in a different form.

(Sri. M. NAGAPPA)

But the creation of the post of Deputy Chief Whip and his salaries cannot be part and parcel of the Mysore Legislature (Amendment) Bill This does not come under item 38 of the Seventh Schedule which speaks of only:

> " Salaries and allowances of members of the Legislature of the State, of the Speaker and Deputy Speaker of the Legislative Assembly and if there is a Legislative Council, of the Chairman and Deputy Chairman thereof"

There is a similar provision with respect to the salaries and allowances of Ministers, in the Constitution.

Art. 164(5) which relates to it reads as follows:

> " The Salaries and allowances of Ministers shall be such as the Legislature of the State may from time to time by law determine and, until the Legislature of the State so determines, shall be specfiied in the Second Schedule"

So, there are two different provisions: one for the Speaker and the Deputy Speaker and members of the Legislature inthe VII Schedule and two for the Ministers under Art: 164. This particular Bill that is being amended has to come under Sl. No. 38 (VII Schedule) under Articles 186 and 19 . This " Deputy Chief Whip " is being defined under the Act itself. His powers, functions and duties are defined now here even in this Bill and it is sheer waste of money. Apart from it this House has no competency to provide for such amendment in this particular Bill. If Government brings a separate Bill, I do not mind. But this cannot be an ammedment to the Mysore Legislature Salaries (Amendment) Bill, 1970.

Therefore my point of order may be upheld. So the Hon. Minister cannot be permitted to introduce this Bills. let Government bring the measure under a different shape and form and undera different category of the Constitution.

† SRI D. B. KALAMANKAR:- (Aland)—I submit that under rule 71 of the Rules of procedure even at the stage of introduction we can raise this point. Under Constitution, provision is made for Speaker, Deputy Speaker, Members, Ministers and the Chief Minister of this House Allthese particulars are to be found in articles 164, 186 and 195 and the Schedules thereunder. But these new posts of Deputy Chief Whips one for the Assembly and one for the Council which are sought to be created under this Bill are nowhere to be found in the Constitution and so any amendment of the Mysore Legislature Salaries Act to this effect will be *ultra vires* the provisions of the Constitution. So my submission is that this amendment to the Act cannot be intouduced in the present

form. Let Government take a decision after full consideration of the whole matter. So it is better that the matter is deferred to a later date. Otherwise it will raise constitutional matters and ultimately the provision may be held *ultra vires*.

4-00 P. M

SRI M. NAGAPPA:— SIR, I missed one point in the course of my objection and that is that in the definition of the term Council of Ministers' these words 'Deputy Chief whips' are not to be found. It includes only Ministers, Deputy Ministers and Parliamentary Seretaries.

SRI B. P. GANGADHAR:—Sir, two points have to be considered here. You were pleased to State that there cannot be any objection at the stage of introduction and if at all it can arise only at a later stage. But my submission is that for anything to be introduced in this House it must be a legal matter that can be justified in law and the Constitution of India. The Constitutional provision must be very carefully perused. If there is provision for that in the Constitution then the creation of these posts will bejustified, but if there is no such provision in the Constitution, then these posts cannot be created. The other question that will arise is what about Whips and Deputy Whips of the Oppositon parties. The absence of provision in the Constitution for these posts of Whips goes to show that the framers of the Constitution purposely and wantonly left out this and did not want such a provision to be incorporated in the Constitution. It is not that they were unable to understand the functions discharged by the Whips because even before the framing of the Constitution we were having the Central Legislature where Whips were functioning. In spite of that, the framers of the Constitution have left it out intentionally. Therefore this provision is not Constitutionally sustainable in law and such a provision cannot b upheld here.

SRI H. SIDDAVEERAPPA (Harihara) :—I have to oppose the introduction of this Bill for a veriety of reasons. This Bill has been brought forward to help the Ruling Party to create to posts of Deputy Chief Whips. I say this with a sense of responsibility. As you are aware, this House was seized of a measure with regard to the recognition that will have to be given to the Oppostion Leader. A Committee was constituted of which the Minister for Parliamentary Affairs was the Chairman and that Committee was seized of this Matter The matter was discussed threadbare there and it was said there that thematter will have to come up before the House

When such is the position, I would like to know whether in a democracy without opposition only one party can think of running the Government in a democratic manner. If at all, if there is any need for

(SRI H. SIDDAVEERAPPA)

a Whip, or Deputy Whip, it is more in favour of the Opposition wher the work is mre ostrenuous. Therefore I submit that this Bill is nothing but a creation of two new posts. Apart from the constitutional objection thathas been taken by my learned friend what he has stated perfectly correct I really admire the laudacity of this Government to come forward with a Bill of this nature for creating two posts at a time when in the country there is famine and when money is needed even for small things. It looks as though when Rome was burning Nero was fiddling. After all though the amount involved is not much, the principle involved and the idea behind is, in my opinion, reprehensible. The way in which they have been tryning to do is nothing but to strengthen their party and their group. This is a measure which should not be allowed and it should be condemned from all hands. I therefore oppose the very introduction of this Bill. It is stated that in Madras some decision was taken in September 1969 and there are many more decisions like this. In the Speakers' Conference a number of decisions were taken with regard to the recognition of the Oppsition. These people are not interested on this Side of the House. They are interested on their Side only. If they want to have money for their own purpose, then by a general rule they can Say: "we are going to arrogate all the funds of Mysore State whether there is budget allotment or not" If this Bill goes before the country, I do not know how they could face the public. They may perhaps think, "it is something like a burning house, let us catch hold of as mcch as we can". At any rate their coming to power in 1972 is zero. They seem to feel, "make hay while the sun shines". I really think that such a thing cannot be countenaced on this Side of the House.

ಶ್ರೀ ಟಿ.ಆರ್. ಶಾಮಣ್ಣ:—ಈಗಾಗಲೇ ಅಶ್ವತ್ಥಕಟ್ಟೆಯಲ್ಲಿರುವಷ್ಟು ಜನ ಮಂತ್ರಿಗಳು ಇದ್ದಾರೆ. ಇವರಿಗೆ ಕೆಲಸವಿಲ್ಲ. ಮತ್ತೆ ಎರಡು ಪೋಸ್ಟ್‌ಗಳನ್ನು ಕ್ರೀಯೇಟ್ ಮಾಡುವುದಕ್ಕೆ ಹೊರಟಿದ್ದಾರೆ. ಈ ಬಿಲ್ಲನ್ನು ಸಭೆಯಲ್ಲಿ ಮಂಡಿಸುವುದಕ್ಕೆ ತಾವು ಅವಕಾಶ ಕೊಡಬಾರದು. ಈ ಕೆಲಸವನ್ನು ಬೇಕಾದರೆ ಉಪ ಮಂತ್ರಿಗಳೇ ಮಾಡಲಿ.

It is shameful to bring in such a legislation when we are discussing the scarcity conditions. It is very unfortunate. We strongly oppose it. It will be shameful to introduce such a Bill particularly under your chairmanship.

MR. DEPUTY SPEAKER:—I am guided by the Rules.

Sri T.R. SHAMANNA:—It is being done against the interests of the country.

Sri P. VENKATAGIRIAPPA:—In view of the opposition expressed, the Hon. Minister may make up his mind to withdraw the Bill.

ಶ್ರೀ ಟಿ. ಆರ್. ಶಾಮಣ್ಣ: ಮುಂದಿನ ಟರ್ಮಿನ ಹೊತ್ತಿಗೆ ತಾವು ಅಧಿಕಾರದಲ್ಲಿ ಇರುವುದಿಲ್ಲ- ಈ ಎರಡು ಹೊಸ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ತಾವು ಏತಕ್ಕೆ ಪಾಪ ಕಟ್ಟಿಕೊಳ್ಳುತ್ತೀರಿ? ಇದನ್ನು ಕೈ ಬಿಡುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:— ಸ್ವಾಮಿ, ಈ ಬಿಲ್ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಆಲ್ - ಇಂಡಿಯಾ ವಿಪ ಕಾನ್‌ಫರನ್ಸ್‌ನಲ್ಲಿ ಅನೇಕ ನಿರ್ಣಯಗಳನ್ನು ಮಾಡುತ್ತಾ ಬಂದಿದ್ದಾರೆ. ಆದರಂತೆ ವಿಪ್ಸ್‌ಗೆ ಉಪಮಂತ್ರಿಯವರ ಸ್ಟೇಟಸ್ ಕೊಡಬೇಕು ಎಂದು ನಿರ್ಣಯ ಮಾಡಿದಾರೆ. ಹಿಂದೆ ಇದೇ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಿಗೆ ಮಂತ್ರಿಯವರಿಗೆ ಇರತಕ್ಕಂಥ ಸ್ಥಾನಮಾನ ಕೊಡಬೇಕೆಂಬ ಬಗ್ಗೆ ನಿರ್ಣಯ ಬಂದಾಗ ಮಾನ್ಯ ಸಿದ್ದವೀರಪ್ಪನವರು ಸ್ಥಾನಮಾನದ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡುವುದು ಒಳ್ಳೆಯದು ಎಂದು ಹೇಳಿದ ಮೇಲೆ ಆದರಂತೆ ಒಂದು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಗೆ ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳೇ ಅಧ್ಯಕ್ಷರಾಗಿದ್ದಾರೆ. ಆ ಸಮಿತಿಯವರು ಅನೇಕ ಸಲ ಸಭೆ ಸೇರಿ ಚರ್ಚೆ ಮಾಡಿದ್ದಾರೆ. ಆದರೆ ಯಾವ ತೀರ್ಮಾನವನ್ನೂ ಸಹ ತೆಗೆದುಕೊಂಡಿಲ್ಲ. ಅವರು ಒಂದು ತೀರ್ಮಾನ ಕೈಕೊಳ್ಳುವವರೆಗೆ ಮಧ್ಯೆ ಮಧ್ಯೆ ಈ ತರಹದ ಬಿಲ್‌ಗಳನ್ನು ತರುವುದು ಸರಿಯಲ್ಲ. ಅದು ತೀರ್ಮಾನವಾಗುವವರೆಗೂ ಇದನು ತಡೆಹಿಡಿಯುವುದು ಒಳ್ಳೆಯದು ಈಗ ಈ ಬಿಲ್ ಮಂಡನೆ ಮಾಡುವುದಕ್ಕೆ ಸಮಯವಲ್ಲ, ಈ ರೀತಿ ಏನಾದರೂ ಮಂಡನೆ ಮಾಡಿದರೆ ಅದಕ್ಕೆ ನಮ್ಮ ಪ್ರತಿಭಟನೆ ಸಂಪೂರ್ಣವಾಗಿದೆಯೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

Sri H. V. KOUJALGI:—Sir, the Bill is in its introduction stage. All the arguments that have been advanced by the hon. Members will be relevant not at this stage but after the Bill is introduced and when it comes for discussion. Hon. Member Sri M. Nagappa stated that the Deputy Chief Whip is not considered either a Minister or Deputy Minister or Parliamentary Secretary. I would like to inform the hon. Member that "Deputy Chief Whip" is defined in the amendment Clause 2 itself.

Sri D. B. KALMANKAR:—Our contention is that the whole Bill itself is not in order. It does not come within the scope of the Mysore Legislature Salaries (Amendment) Bill.

Sri H. V. KOUJALGI:—The definition can be included in this amending Bill, and if we go through such Bills which have been introduced and passed in other Legislatures, *e.g.*, Maharashtra and other States, the same procedure has been followed and the same Bills have been passed. Even in Parliament, there are three Whips in Rajya Sabha and three in Lok Sabha and they are paid. Such a Bill has been passed in the Parliament also, no matter whether it is Congress (R) or Congress (O). It is the opinion of all parliamentary systems that these Whips should be more active and prompt and the busines of the House should be carried on very quickly So, they have been paid. Under the circumstances, I think it is a proper Bill and I may be permitted to introudce it.

Sri H. SIDDAVEERAPPA:—We have hardly one year and perhaps one Budget Session, and so where is the work either for the Chief Whip or for the Deputy Chief Whip? Why have you come at this late stage?

SRI H. V. KOUJALGI :—I beg to introduce the Mysore Legislature Salaries (Amendment) Bill. 1970 as published in the Mysore Gazette, dated 26th September 1970.

SRI H. SIDDAVEERAPPA :—They have given a very long financial memorandum, misleading the House. They have stated that the annual recurring expenditure in respect of the two posts of Deputy Chief Whips will be Rs. 9,600/- at the rate of Rs. 800/- per month. I presume that it is in addition to his salary as a Member of the House. In all it comes to more than Rs. 9,600/-. Therefore the Bill that has been brought here is not in proper form. Let the Government withdraw it and bring it in a proper form.

MR. DEPUTY SPEAKER :—The Mysore Legislature Salaries (Amendment) Bill, 1970 as published in the Mysore Gazette is introduced.

SRI H. SIDDAVEERAPPA ;—Even if the Bill is introduced, you will have to take the vote of the House when we oppose it.

MR. DEPUTY SPEAKER :—The Bill is already published, When it is published it has to be introduced. Sri Nagappa raised objection on grounds of competency of the Legislature. The Legislature has got powers. Another objection raised is about the creation of post of Whips. But the posts of Whips are mentioned in the Constitution. A Bill of this type has already been passed previously by this House *i.e*, arliamentary Secretaries Bill.

SRI M. NAGAPPA :—Bill relating to Ministers' Salary is different from the Bill relating to Members salary.

MR. DEPUTY SPEAKER :—In the Constitution the posts of Parliamentry Secretaries and Whips are not mentioned. Therefore, the constitutional objection raised by Sri Nagappa does not stand. Thera is no force in the point of order raised by Sri Nagappa.

SRI K. H. PATIL ;—Can we take your ruling that no leave of the House is necessary by way of putting it to vote. When Sri Siddaveerappa opposed it, it has been said that leave is granted. Shall we take that leave is granted. It will be a heatlhy sign in the interest of the opposition.

MR. DEPUTY SPEAKER :—I request the Hon. Member to read rule Nos. 64 and 71. The Bill has already been published by the Speaker.

Motion *re* : **Scarcity Conditions in the State**
Debate continued.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡಲುಪೇಟೆ):—

ಮಾನ್ಯ ಅಧ್ಯಕ್ಷರೇ ದುಷ್ಕಾಲದ ಪರಿಸ್ಥಿತಿ ಬಗ್ಗೆ ಮಾತನಾಡುವಾಗ ಇಲ್ಲಿ ಹೇಳಬೇಕಾದರೆ. ನಾನು ಈ ಸಭೆಗೆ ಮೆಂಬರಾಗಿ ಸುಮಾರು ೧೩ ವರ್ಷದಿಂದಲೂ ೧೩ ಸಾರಿ ಮಾತನಾಡಿದ್ದೇನೆ. ಹದಿಮೂರು ವರ್ಷಗಳಿಂದಲೂ ನನ್ನ ಗುಂಡಲುಪೇಟೆ ತಾಲ್ಲೂಕಿನ ವಿಚಾರದಲ್ಲೇ ಇಲ್ಲಿ ಮಾತನಾಡಿದ್ದೇನೆ. ನಮ್ಮ ತಾಲ್ಲೂಕಿಗೆ ಇಂತಿಂತಹ ಕೆಲಸಗಳಾಗಬೇಕು ಎಂದು ಹೇಳುತ್ತಾ ಬರುತ್ತಿದ್ದೇನೆ. ಸರ್ಕಾರದವರೂ ಕೂಡ ಇಷ್ಟೋ ಇಷ್ಟೋ ಸಾವಿರ ರೂಪಾಯಿಗಳನ್ನು ರಿಲೀಫ್ ವರ್ಕ್‌ಗಳಿಗಾಗಿ ಕೊಡುತ್ತಾರೆ. ನಮ್ಮ ಕಡೆ ದುಷ್ಕಾಲದ ಪರಿಸ್ಥಿತಿ ಬರುತ್ತಲೇ ಇದೆ. ಆದರೆ ಭಗವಂತ ಏನೋ ಅಷ್ಟು ಕರುಣೆ ಇಟ್ಟು ಸ್ವಲ್ಪ ಮಳೆ ಹನಿ ನಮ್ಮ ತಾಲ್ಲೂಕಿನ ಕಡೆಗೂ ಬಿದ್ದಿತು ಎಂದು ತಿಳಿದರೆ ಆ ತಕ್ಷಣ ಸರ್ಕಾರದವರು ಒಂದು ಕಾನ್‌ಫಿಡೆನ್‌ಷಿಯಲ್ ಲೆಟರನ್ನು ಎಲ್ಲ ಅಧಿಕಾರಿಗಳಿಗೂ ಬರೆದು ರಿಲೀಫ್ ವರ್ಕ್ಸ್‌ಗಳ ಕೆಲಸ ಈಗ ಬೇಡ ನಿಲ್ಲಿಸಬಹುದು ಎಂದು ಹೇಳಿಬಿಡುತ್ತಾರೆ. ಎಲ್ಲಾ ಕೆಲಸಗಳೂ ಹಾಗೇ ನಿಂತು ಹೋಗುತ್ತವೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ನಿನ್ನೆ ಮಾತನಾಡುತ್ತಾ ಪರ್ಮನೆಂಟು ರಿಲೀಫ್ ವರ್ಕ್ಸ್‌ಗಳಿಗಾಗಿ ಸುಮಾರು ಹತ್ತು ಕೋಟಿಯಷ್ಟು ಒಂದು ಪ್ರೊಗ್ರಾಂನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು, ಇದಕ್ಕೆ ಕೇಂದ್ರದವರು ಇನ್ನೂ ದುಡ್ಡು ಕೊಟ್ಟಿಲ್ಲ ಎಂದು ತಮ್ಮ ಶೋಕವನ್ನು ಇಲ್ಲಿ ತೋಡಿಕೊಂಡರು. ನಾನು ಮೊದಲನೇ ಸಾರಿ ಈ ಸಭೆಗೆ ಸದಸ್ಯಳಾಗಿ ಬಂದಾಗ ನಮ್ಮ ಚೀಫ್ ಮಿನಿಸ್ಟರ್‌ರವರೂ ಕೂಡ ಟೂರು ಮಾಡುವಾಗ ಮೊದಲನೇ ಭಾರಿಗೆ ನಮ್ಮ ತಾಲ್ಲೂಕಿಗೆ ಬಂದಿದ್ದರು. ಅವರು ಆಗ ಹೇಳಿದರೂ ನನ್ನ ತಾಲ್ಲೂಕು ಎಂದರೆ ಚಿತ್ರದುರ್ಗ ಹಾಗೂ ನಿಮ್ಮ ತಾಲ್ಲೂಕು ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತಲೇ ಇದೆ ಎಂದು. ಆಗ ಇವರ ಜೊತೆಯಲ್ಲಿ ಡಿವಿಜನಲ್ ಕಮಿಷನರ್ ಶ್ರೀ ಶೇಷಗಿರಿಯಾಯರು, ಚೀಫ್ ಇಂಜನೀಯರುಗಳು ಎಕ್ಸಿಕ್ಯೂಟಿವ್ ಇಂಜನೀಯರುಗಳು, ಡೆಪ್ಯುಟಿ ಕಮಿಷನರು ಹಾಗೂ ಇನ್ನಿತರ ಅಧಿಕಾರಿಗಳಿಂದ ಕೂಡಿದ ಸುಮಾರು ೨೦ ಕಾರುಗಳು ನಮ್ಮ ತಾಲ್ಲೂಕಿಗೆ ಬರುತ್ತಿದ್ದವು ಈಗ ಆ ರೀತಿ ಯಾವ ಅಧಿಕಾರಿಗಳು ಅಷ್ಟು ಬರುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಭಂಡಾರಗಳು ಇವೆ ಆದರೆ ಯಾವ ಪ್ರಾಜೆಕ್ಟ್‌ಗಳು ಕೂಡ ಆಗಿಲ್ಲ. ನಮ್ಮ ತಾಲ್ಲೂಕಿನ ಜನರಿಗೆ ಕಷ್ಟಗಳು ಇಲ್ಲ ಎಂದು ಅಲ್ಲಿನ ಅಧಿಕಾರಿಗಳು ಹೇಳಿ ಅಲ್ಲಿನ ಜನರು ಸಮಾಧಾನದಿಂದ ಇದ್ದಾರೆ ಎಂದು ಭಾವಿಸಿರಬಹುದು. ಆಗಲೂ ಸಹಾ ಇದೇ ತರಹ ಫ್ಯಾಮಿನ್ ನಮ್ಮಲ್ಲಿ ಬಂದಿತ್ತು ಆಗ ನಮ್ಮ ತಾಲ್ಲೂಕಿಗೆ ಶ್ರೀ ಎಂ. ಪಿ. ಪಾಟೀಲರು ಬಂದಿದ್ದರು ಅವರಿಗೆ ನಾನು ''ತಮ್ಮ ಕೈಲಾದ ಸಹಾಯ ಮಾಡಿ'' ಎಂದು ಕೇಳಿಕೊಂಡಿದ್ದೆ. ಅವರೇನೂ ಮಾಡಲಿಲ್ಲ. ಅವರ ನಂತರ ಅಲ್ಲಿಗೆ ಬಂದವರು ಶ್ರೀ ಕಡಿದಾಳ್ ಮಂಜಪ್ಪನವರು ಅವರು ನಮ್ಮ ತಾಲ್ಲೂಕಿಗೆ ಬಂದಿದ್ದಾಗ ನನ್ನನ್ನು ನೋಡಿ ''ನಿಮ್ಮನ್ನು ನೋಡಿದರೆ ನಿಮ್ಮ ತಾಲ್ಲೂಕಿನಲ್ಲಿ ಫ್ಯಾಮಿನ್ ಇದೆ. ಎಂದರೆ ಯಾರು ನಂಬುತ್ತಾರೆಂಡು ಅವರು ಹೇಳಿದರೆ. ನಾನು ಅವರನ್ನು ''ನಿಮ್ಮನ್ನು ನೋಡಿದರೆ ನಿಮ್ಮ ತಾಲ್ಲೂಕಿನಲ್ಲಿ ಕ್ಷಾಮ ಇದೆ ಎಂದು ಯಾರು ಹೇಳುತ್ತಾರೆ ಎಂದು ನಾನು ಅವತ್ತೊಂದಿಗೆ ಜಗಳವಾಡುವುದು ಇದರಲ್ಲೇ ಮುಗಿಯಿತು ಅವರ ನಂತರ ಶ್ರೀ ಎಂ. ವಿ. ಕೃಷ್ಣಪ್ಪನವರು ಅಲ್ಲಿಗೆ ಬಂದಗು ''ಏನು ನಿಮ್ಮ ಸೋಲಾರಕ್ಕೆ ದುಡ್ಡನ್ನೆಲ್ಲ ಉಪಯೋಗ ಮಾಡಿಕೊಳ್ಳುತ್ತಿದ್ದೀರಿ, ನಮ್ಮ ತಾಲ್ಲೂಕಿನಲ್ಲೇ ನೂ ಜನರಿಗೆ ಅನುಕೂಲ ಮಾಡುವುದಿಲ್ಲವೇ'' ಎಂದು ಅವರೊಂದಿಗೂ ಜಗಳವನ್ನು ಕಾದಿದ್ದಾಯಿತು. ಆವರಿಂದಲೂ ಏನು ಆಗಲಿಲ್ಲ ಅವರೆಲ್ಲಾ ಆದಮೇಲೆ ಈಗ ಪಾಪ ಇವರು ಬಂದಿದ್ದಾರೆ ನೋಡುವುದಕ್ಕೇನೊ ಇವರು ಒಹಳ ಒಳ್ಳೆಯವರಾಗೇ ಕಾಣುತ್ತಿದ್ದಾರೆ. ಆದರೇನು ಪಾಪ ಇವರು ತುಂಬಾ ಅಂಜುಬುರಕರು. ಇವರನ್ನು ನೋಡಿದರೆ ನಾನೇನೂ ಹೇಳುವುದಿಲ್ಲ. ಅವರನ್ನು ನೋಡಿ ನಾನು ಅಯ್ಯೋ ಪಾಪ ಎಂದಷ್ಟೇ ಹೇಳುತ್ತೇನೆ ಆದರೆ ಇವರಿಗೇತಕ್ಕೆ ಇಷ್ಟು ಅಂಜುಬುರುಕುತನವೋ ನನಗೆ ಗೊತ್ತಾಗುತ್ತಿಲ್ಲ ಇವರಿಗೆ ಆ ಬ್ರಹ್ಮ ಎಷ್ಟು ಆಯಸ್ಸನ್ನು ಕೊಟ್ಟಿದ್ದಾನೋ ಅದು ಮುಗಿಯುವವರೆಗೆ ಇವರಿಗೆ ಯಾರೇನೂ ಮಾಡಿದರೂ ಇವರು ಸಾಯುವುದಿಲ್ಲ. ಇವರೇತಕ್ಕೆ ಇಷ್ಟು ಈ ಅಧಿಕಾರಕ್ಕೆ ಅಂಟಿಗೂಡು ಅಂಜುಬುರುಕುತನದಿಂದ ಕೆಲಸ ಮಾಡಬೇಕು ಎಂದು ಕೇಳುತ್ತೆನೆ? ಸಾಯುವತನಕ ಅಧಿಕಾರಕ್ಕೆ ಅಂಟಿಕೊಂಡು ಇರುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ತಾವು ಈ ಕೆಲಸಕ್ಕೆ ಬಂದಮೇಲೆ ಧೈರ್ಯವಾಗಿ ನಿಮ್ಮ ಕೈಲಾದ ಕೆಲಸವನ್ನು ಮಾಡಿ ತಾವೇತಕ್ಕೆ ಇಷ್ಟು ಅಂಜುತ್ತೀರಿ, ಮಾಡತಕ್ಕ ಕೆಲಸಗಳನ್ನು ಧೈರ್ಯದಿಂದ ಮಾಡಿ ಎಂದು ನಾನೂ ಎಷ್ಟೋ ಗೊಗರದೆ. ಆದರೇನೂ ಪ್ರಯೋಜನವಾಗಲಿಲ್ಲ. ಇಷ್ಟೇಗೆ ಅಧಿಕಾರವನ್ನು ಕೊಟ್ಟಿರುವುದು ಅದ್ಯಾರದೊ ಕೈಗೆ ಚಂದ್ರಾಯುಧವನ್ನು ಕೊಟ್ಟಹಾಗಾಯಿತೆಂದ ಹಾಗೆ ಆಗಿದೆ.

4-30 P. M.

ಇನ್ನು ಲ್ಯಾಂಡ್ ರೆವಿನ್ಯೂ ರೆಮಿಷನ್ ವಿಚ್ಚಾರಕ್ಕೆ ಬಂದರೆ—ನನ್ನ ತಾಲ್ಲೂಕ್ ಮತ್ತು ಶ್ರೀದೇವರಾಜ..... ಅರಸರ ತಾಲ್ಲೂಕ್ ಮತ್ತು ಇನ್ನು ಕೆಲವರ ತಾಲ್ಲೂಕುಗಳಿಗೆ ಯಾವ ರೆಮಿಷನ್ನೂ ಕೊಟ್ಟಿಲ್ಲ. ಅಲ್ಲಿ ದೈವದತ್ತ.....

(ಶ್ರೀಮತಿ ಕೆ. ನಾಗರತ್ನಮ್ಮ)

ವಾದ ನದಿಗಳಿಲ್ಲ, ದೊಡ್ಡ ಕೆರೆಗಳಿಲ್ಲ, ಹೆಚ್ಚು ತರೀ ವ್ಯವಸಾಯವಿಲ್ಲ. ಆದಾಗ್ಯೂ ಅಲ್ಲಿಗೆ ರೆವಿಷನ್ ಇಲ್ಲ. ಆದರೆ ಅದೇ ದೊಡ್ಡ ಪ್ರಾಜೆಕ್ಟ್ ಇದ್ದು ಮತ್ತು ನದಿಗಳು ಹರಿಯತಕ್ಕ ಶ್ರೀ ಸಿದ್ದಯ್ಯನವರ ತಾಲ್ಲೂಕಿಗೆ ಮಾತ್ರ ರೆವಿಷನ್ ಕೊಟ್ಟಿದ್ದಾರೆ. ಇದಕ್ಕೆ ಯಾವ ನೀತಿ ಅನುಸರಿಸುತ್ತಿದ್ದಾರೋ ತಿಳಿಯಲಿಲ್ಲ.....

ಶ್ರೀ ಡಿ ಎಂ. ಸಿದ್ದಯ್ಯ:—ಮೂನ್ನ ಸದಸ್ಯರು ಹೇಳುತ್ತಿರುವಂತೆ ನನ್ನ ತಾಲ್ಲೂಕಿನಲ್ಲಿ ನದಿ ಇರುವುದು ನಿಶ್ಚಯ ಮತ್ತು ಕಪಿನಿ ಪ್ರಾಜೆಕ್ಟಿರುವುದೂ ನಿಶ್ಚಯ. ಆದರೆ ಅವುಗಳಿಂದ ಅರ್ಧ ತಾಲ್ಲೂಕಿಗೆ ಮಾತ್ರ ಅನುಕೂಲವಾಗುತ್ತಿದೆ, ಇನ್ನುಳಿದರ್ಧ ತಾಲ್ಲೂಕು ಕ್ಷಾಮದಿಂದಕೂಡಿದೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :—ನಾನು ಹಾಗೆ ಯಾರಿಗೂ ಕೊಡಬಾರದೆಂದು ಹೇಳುವುದಿಲ್ಲ. ಆದರೆ ನಾನು ಹೇಳುವುದಿಷ್ಟೇ; ನೀವು ಸರ್ಕಾರದವರ ಕಣ್ಣಿಗೆ ಬಿದ್ದಹಾಗೆ ನಾನು ಇಲ್ಲಿ ಇಷ್ಟು ದಪ್ಪನಾಗಿ ಕುಳಿತ್ತಿದ್ದರೂ ಅವರ ಕಣ್ಣಿಗೆ ಬೀಳುತ್ತಿಲ್ಲವಲ್ಲಾ ಎಂಬುದು ನನ್ನ ಸಂಕಟ. ನಮ್ಮ ರೆವಿನ್ಯೂ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬನ್ನಿ ಎಂದರೂ ಅವರು ಬರುತ್ತಿಲ್ಲ. ಬಂದರಲ್ಲವೇ ಅಲ್ಲಿನ ನಿಜ ಪರಿಸ್ಥಿತಿ ಗೊತ್ತಾಗುವುದು ? ಅವರು ನಮ್ಮ ಮನೆಗೆ ಬಾರದಿದ್ದರೂ ಚಿಂತೆಯಿಲ್ಲ, ಅವರು ನಮ್ಮಲ್ಲಿ ಊಟಕ್ಕೆ ಬಾರದಿದ್ದರೂ ಚಿಂತೆಯಿಲ್ಲ, ಅವರು ಬಂದು ನಮ್ಮ ತಾಲ್ಲೂಕಿನ ನಿಜಸ್ಥಿತಿ ಏನಿದೆ ಅಲ್ಲಿನ ಜನರು ಎಷ್ಟು ತೊಂದರೆ ಪಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಲಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಾಜೆಕ್ಟ್‌ಗಳ ವಿಚಾರಕ್ಕೆ ಬಂದರೆ–ಅನೇಕ ಕಡೆಗಳಲ್ಲಿ ನೀರಾವರಿ ಕಾಮಗಾರಿಗಳ ಬಗ್ಗೆ ಸರ್ಕಾರದವರು-ಬೇಕಾದಷ್ಟು ದುಡ್ಡನ್ನು ಕೊಟ್ಟಿದ್ದಾರೆ. ಕೊಡಲಿ ಆದರೆ ನೊಡ್ಡ ನೀರಾವರಿಗೆ ಅನುಕೂಲ ವಿರತಕ್ಕ ಕಡೆ ದೊಡ್ಡ ಕಾಮಗಾರಿಗಳನ್ನು ಮಾಡುವುದು ಸರಿ. ಆದರೆ ನಮ್ಮಲ್ಲಿ ಅಂಥ ಪ್ರಕೃತಿದತ್ತವಾದ ಅನುಕೂಲಗಳನ್ನು ದೇವರು ನಮಗೆ ಕೊಟ್ಟಿಲ್ಲ. ಅಲ್ಲಿ ಏನಿದ್ದರೂ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾತ್ರ ನಡೆಸುವುದಕ್ಕೆ ಅವಕಾಶವುಂಟು. ನಮ್ಮ ತಾಲ್ಲೂಕಿನಲ್ಲಿ ನಲ್ಲೂರು ಅಮಾನಿ ಕೆರೆ ಎಂಬುದನ್ನು ಕಟ್ಟಿಸಿಕೊಡಿ ಎಂದು ಕೇಂದ್ರದಿಂದ ಬಂದಿದ್ದ ಅಧಿಕಾರಿಗಳಿಗೂ ಆ ವಿಚಾರವನ್ನು ತಿಳಿಸಿದ್ದೇನೆ. ಅಲ್ಲಿ ಆ ಕೆರೆಯನ್ನು ಕಟ್ಟಿದರೆ ೧೮–೨೦ ಗ್ರಾಮದ ಜನರಿಗೆ ಬಹಳ ಅನುಕೂಲವಾಗುತ್ತದೆ, ಅಲ್ಲದೆ ೫ ೬ ಸಾವಿರ ಎಕರೆ ನೀರಾವರಿ ಆಗುತ್ತೆ ಎಂದು ಹೇಳಿದರೆ ಆ ಕೆರೆಯನ್ನು ಇವರು ತೆಗೆದುಕೊಳ್ಳುತ್ತಿಲ್ಲ. ಈ ಹಿಂದೆ ನಾನೇ ಒಂದಾವರ್ತಿ ಶ್ರೀ ಎಚ್. ಎಂ. ಚನ್ನಬಸಪ್ಪನವರು ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದಾಗ ಅವರಿಗೆ ಮಂಗಳದ ಕೆರೆಯನ್ನು ಕಟ್ಟಿಸಿಕೊಡಿ ಎಂದು ಒತ್ತಾಯ ಮಾಡಿದ್ದಕ್ಕೆ ಅವರು ಆಗ ಆ ಯೋಜನೆಯನ್ನು ಫೀಜಿಬಲ್ ಅಲ್ಲ ಎಂದು ಹೇಳಿ ಅದನ್ನು ಕೈಬಿಟ್ಟರು. ಈ ದಿವಸ ಅದೇ ಕೆಲಸವನ್ನು ಹೇಗೆ ತೆಗೆದುಕೊಂಡಿದ್ದಾರೆ ? ಆ ದಿವಸ ಫೀಜಿಬಲ್ ಆಗದಿದ್ದುದು ಈ ದಿವಸ ಹೇಗೆ ಫೀಜಿಬಲ್ ಆಯಿತು ? ಅಲ್ಲಿ ಆ ಕಾಮಗಾರಿಯನ್ನು ನಡೆಸಲು ಅದು ಆ ಬಂಡೀಪುರದ ಕಾಡಿನಲ್ಲಿ ಇರುವುದರಿಂದ ಕೂಲಿ ಜನರು ಸಿಕ್ಕದೆ ಇರುವುದರಿಂದ ಪ್ರತಿ ನಿತ್ಯವೂ ಅಲ್ಲಿ ಕೆಲಸ ಮಾಡುವುದಕ್ಕಾಗಿ ಲಾರಿಗಳಲ್ಲಿ ಅಸಿಸ್ಟೆಂಟ್ ಮತ್ತು ಎಗ್ಜಿಕ್ಯುಟೀವ್ ಇಂಜನಿಯರು ಕೂಲಿ ಜನರನ್ನು ನಮ್ಮ ಭಾಗದಿಂದ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಹೀಗೆ ಎಲ್ಲಿ ಕೂಲಿ ಆಳುಗಳು ಸಿಕ್ಕುತ್ತಿಲ್ಲವೋ ಅಲ್ಲಿ ಕೆಲಸಕ್ಕೆತರದೂದು ಮಾಡಿ ಎಲ್ಲಿ ಕೆಲಸಕ್ಕೆ ಜನರು ಸಿದ್ಧವಾಗಿದ್ದಾರೋ ಅಲ್ಲಿ ಸರ್ಕಾರದವರು ಕೆಲಸಗಳನ್ನು ಮಾಡುವುದಕ್ಕೆ ಹಿಂದೆಗೆಯುತ್ತಿದ್ದಾರೆ. ನಾನು ಇವರಿಗೆ ಒತ್ತಾಯ ಮಾಡತಕ್ಕ ಆ ನಲ್ಲೂರು ಅಮಾನಿ ಕೆರೆಯನ್ನಾದರೂ ನಿರ್ಮಾಣ ಮಾಡಿದರೆ ಯಾರಿಗೆ ಅದರಿಂದ ಪ್ರಯೋಜನವಾಗುತ್ತದೆ ? ಅಲ್ಲಿ ಬಹಳ ಹಿಂದುಳಿದ ಅಂದರೆ ಆ ಜನಾಂಗದವರು ಹಿಂದುಳಿದವರಲ್ಲಿ ಹಿಂದುಳಿದ ವರಾಗಿದ್ದಾರೆ ಅಷ್ಟು ಹಿಂದುಳಿದ ಜನರು ಆ ಹರಿಜನರಲ್ಲೂಇಲ್ಲ–ಗಿರಿಜನರಲ್ಲೂ ಇಲ್ಲ. ಆ ಜನರನ್ನು ಸುಣ್ಣ ಸುಡತಕ್ಕವರು ಉಪ್ಪಲಿಗರು ಎಂದು ಕರೆಯುತ್ತಿದ್ದಾರೆ. ಅವರಲ್ಲಿ ಇಂದಿಗೂ ಇಬ್ಬರು ಪದವೀಧರರಿಲ್ಲ ಹತ್ತು ಜನ ಎಸ್. ಎಸ್. ಎಲ್. ಸಿ ಪಾಸಾದ ಹುಡುಗರಿಲ್ಲ. ಅಂಥ ಹಿಂದುಳಿದವರ್ಗಕ್ಕೆ ಆ ಅನುಕೂಲ ಮಾಡಿ ಕೊಡಿ. ಈಗ ಆ ಜನಕ್ಕೆ ಅಲ್ಲಿ ಯಾವ ಕೂಲಿ ಕೆಲಸಗಳೂ ಸಿಕ್ಕುತ್ತಿಲ್ಲ ಎಂದರೆ ಅದನ್ನು ಮಾಡುತ್ತಿಲ್ಲ. ಆ ಮಂಗಳ ಕೆರೆಯನ್ನು ಉದ್ಧಾರ ಮಾಡಿದರೆ ಅದರಿಂದ ಯಾರಿಗೆ ಅನುಕೂಲವಾಗುತ್ತದೆ ? ಅದರ ಸಮೀಪದಲ್ಲೇ ಒಂದು ಟ್ರೈಬಲ್ ಕಾಲೋನಿಯನ್ನು ಮಾಡಿದ್ದಾರೆ. ಅಲ್ಲಿ ೭೦ ಜನರಿಗೆ ೭೦ ಜೊತೆ ಎತ್ತುಗಳನ್ನು ಕೊಡಿಸಿದ್ದಾರೆ. ಆದರೆ ಅಲ್ಲಿರತಕ್ಕ ಜನರೆಲ್ಲಾ ಅಲ್ಲಿಯ ಒಬ್ಬ ಮುಖಂಡರ ಮನೆಯಲ್ಲಿ ಪ್ರತಿ ದಿನವೂ ಕೆಲಸ ಮಾಡಿಕೊಡುವುದಲ್ಲದೆ ಅವರ ಜಮೀನುಗಳನ್ನೂ ಕೂಡ ಆ ಜನರು ಉತ್ತು ಕೊಡಬೇಕು. ಆ ಮಂಗಳದ ಕೆರೆಯನ್ನು ಕಟ್ಟಿಸುತ್ತಿರುವ ಕಡೆಯಲ್ಲೇ ಆಲೂರು ಎಂಬ ಒಂದು ಗ್ರಾಮವಿದೆ. ಅಲ್ಲೇ ಸುತ್ತಮುತ್ತ ಇರತಕ್ಕ ಜನರನ್ನು ಸೇರಿಸಿಕೊಂಡು ಅಲ್ಲಿ ಒಂದು ಸೊಸೈಟಿಯನ್ನು ಫಾರಂ ಮಾಡಿಕೊಂಡಿದ್ದಾರೆ. ಆ ಸೊಸೈಟಿಯವರು ೫೦–೬೦ ಸಾವಿರ ರೂಪಾಯಿ

ಗಳನ್ನು ಸಾಲವಾಗಿ ಪಡೆದುಕೊಂಡಿದ್ದಾರೆ. ಆದರೆ ಅಲ್ಲಿರತಕ್ಕ ಬಡ ಜನರಿಗೆ ಇಲ್ಲಿಯವರೆಗೂ ಮೂರು ಕಾಸೂ ಕೂಡ ಸಾಲ ಸಿಕ್ಕಿಲ್ಲ. ಅಲ್ಲಿರತಕ್ಕ ಬಡಜನಕ್ಕೆ ೪ ಆಣೆ ಕೂಲಿ ಕೆಲಸವೇನೋ ಸಿಕ್ಕುತ್ತಿದೆ. ಒಂದು ಕಡೆ ನಾವು ಇಲ್ಲಿ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದರೆ ಕೇಂದ್ರ ಸರ್ಕಾರದವರು ದುಡ್ಡನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ಹಾಗಿದ್ದರೆ ಈಗ ಇವರು ಹಿಂದೆ ಫೀಜಿ ಬಲ್ ಅಲ್ಲ ಎಂದು ಕೈಬಿಡಲಾಗಿದ್ದ ಮಂಗಳ ಕೆರೆಗೆ ಹೇಗೆ ೧೮–೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ ? ಆ ಹಣವೆಲ್ಲಿಂದ ಬಂತು ? ಅಲ್ಲಿ ಕಟ್ಟತಕ್ಕ ಕೆರೆಯಿಂದ ಈ ದಿವಸ ಯಾರಿಗೆ ಅನುಕೂಲ ವಾಗುತ್ತದೆ ? ಯಾರಿಗೆ ಈ ದಿವಸ ಕೂಲಿ ಸಿಕ್ಕಬೇಕೋ ಅವರಿಗೆ ಕೂಲಿ ಸಿಕ್ಕುತ್ತಿಲ್ಲ ಅರ್ಹರಾದವರಿಗೆ ಅನುಕೂಲಗಳು ದೊರೆಯುತ್ತಿಲ್ಲ. ಈ ದಿವಸ ಈ ಸರ್ಕಾರದಿಂದ ಯಾರಿಗೆ ಅನುಕೂಲ ಸಿಕ್ಕುತ್ತಿದೆಯೆಂದರೆ ಕಾರಿನಮೇಲೆ ಕಾರು ಮನೆಯ ಮೇಲೆ ಮನೆ ಮತ್ತು ಆಸ್ತಿಯ ಮೇಲೆ ಆಸ್ತಿಯನ್ನು ಮಾಡತಕ್ಕವರಿಗೆ, ಇಂಥವರಿಗೆ ಅನುಕೂಲ ಮಾಡಿಕೊಡಲು ಕೇಂದ್ರದಿಂದ ಸಹಾಯ ಸಿಕ್ಕಬೇಕಾಗಿತ್ತೇನು ?

ಇನ್ನು ಕೆಲವು ಕಡೆ ಈ ದಿವಸ ರೇಷ್ಮೆ ಕಡ್ಡಿಯನ್ನು ಬೆಳೆಯುತ್ತಿದ್ದಾರೆ. ಆ ಜನಕ್ಕೆ ಈ ಹೊತ್ತು ಜೋಳ ರಾಗಿ ಕೊಂಡುಕೊಳ್ಳುವುದಕ್ಕೂ ಕೂಡ ಕೈಲಿ ಕಾಸಿಲ್ಲ ಇನ್ನು ಅವರು ರೇಷ್ಮೆ ಮೊಟ್ಟೆಯನ್ನು ಖರೀದಿ ಮಾಡುವುದಾದರು ಹೇಗೆ ? ಇಂಥ ಬಡಪಾಯಿಗಳಿಗೆ ಅನುಕೂಲವಾಗುವಂತೆ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರೆ ಅದಕ್ಕೂ ಬೈಗಳು ಬಡವರಿಗೆ ನೀವಾದರೂ ಸಹಾಯ ಮಾಡಿ ಎಂದರೆ ಅದೂ ಇಲ್ಲ. ಒಂದು ಕಡೆ ಒಬ್ಬ ೧೪೨ ಎಕರೆಗಳಿಗೆ ರೇಷ್ಮೆ ಕಡ್ಡಿಯನ್ನು ಹಾಕಿದ್ದಾನೆ. ಅವನಿಗೆ ಬ್ಯಾಂಕಿನಲ್ಲಿ ದುಡ್ಡಿಲ್ಲ. ಇನ್ನೊಬ್ಬ ೧೮೦ ಎಕರೆಗಳಿಗೆ ಕಡ್ಡಿಯನ್ನು ಹಾಕಿದ್ದಾನೆ. ಅವನಿಗೂ ಬ್ಯಾಂಕಿನಲ್ಲಿ ದುಡ್ಡಿಲ್ಲ ಎಂದರೆ ಅವರೇನು ಮಾಡಬೇಕು ? ಹೀಗಿರುವುದರಿಂದ ಕೇಂದ್ರದವರು ಬ್ಯಾಂಕುಗಳನ್ನು ನ್ಯಾಷನಲೈಜ್ ಮಾಡಿದ್ದು ತಪ್ಪೇ ?

ಮೊನ್ನೆ ದಿವಸ ನಮ್ಮ ಕಡೆ ಯಾರಿಗೂ ದುಡ್ಡು ಸಿಕ್ಕಿಲ್ಲವೆಂದು ನಮ್ಮ ಡೆವಲಪ್‌ಮೆಂಟ್ ಆಫೀಸರಿಗೆ ಫೋನ್ ಮಾಡಿ ಅವರಿಂದ ಹೇಳಿಸಿ ಮಾತಿದರೆ ಅಲ್ಲಿ ಮೈಸೂರು ಸ್ಟೇಟ್ ಬ್ಯಾಂಕಿನಲ್ಲಿ ಒಬ್ಬ ಆಫೀಸರ್ ಇದ್ದಾನೆ. ಅವನು ಒಂದು ತರಹ ಜಂಟಲ್‌ಮ್ಯಾನ್, ಅವನ ಹೆಸರು ವಿಜಯರಾಘವನ್ ಅಂತ. ಅವನು ಭಾಯಿಗೆ ಬಂದ ಹಾಗೆ ಮಾತನಾಡುತ್ತಾನೆ. ಅಲ್ಲಿ ೩–೪ ಜನ ಅಧಿಕಾರಿಗಳು ಇದ್ದಾರೆ. ಅವರು ಹೇಳುತ್ತಾರೆ ಎಂ.ಎಲ್.ಎ., ಎ.ಎಲ್.ಸಿ., ಅಂತ ಯಾರು ದೊಡ್ಡವರು ಇರುತ್ತಾರೋ ಅಂಥಾವರಿಗೇ ಕೊಡಬೇಕಾಗಿದೆ ಅಂತ ಅಂದರೆ ಯಾರಿಗೆ ನಿಜವಾಗಿ ದುಡ್ಡು ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಾ ಇಲ್ಲ ಇವರಿಗೆ ಬೇಕಾದವರಿಗೆ, ಅವರಿಗೆ ಕೊಡಿಸುವುದಕ್ಕೋಸ್ಕರ ಸೆಂಟ್ರಲ್ ಗೌರ್ನಮೆಂಟ್‌ನವರು ನಮ್ಮ ರಾಜ್ಯ ಸರ್ಕಾರಕ್ಕೆ ದುಡ್ಡು ಕೊಡಬೇಕಾಗಿದೆ. ಇನ್ನೆಷ್ಟರಮಟ್ಟಿಗೆ ಈ ಫ್ಯಾಮಿನ್ ರಿಲೀಫ್ ನಡೆಯಬಹುದು ಎಂದು ಯೋಚನೆ ಮಾಡಬೇಕಾಗಿದೆ. ನಮ್ಮ ಸೆಂಟ್ರಲ್ ಗೌರ್ನಮೆಂಟ್ ದುಡ್ಡನ್ನೆಲ್ಲಾ ಈ ರೀತಿ ಹಂಚಿಕೊಳ್ಳುತ್ತಿದ್ದಾರೆ. ಕೇಂದ್ರವೇ ಅಲ್ಲ ಕುಬೇರ ಒಂದು ದುಡ್ಡು ಕೊಟ್ಟರೂ ಕೂಡ ನೀವು ಹಂಚಿಕೊಳ್ಳುವುದಕ್ಕೆ ಸಾಕಾಗುವುದಿಲ್ಲ ಚೆನ್ನಾಗಿ ತಿಂದು ತೇಗುವವರಿಗೆ ಎಲ್ಲಿಯವರೆಗೆ ಕೊಟ್ಟರೆ ಸಾಕಾಗುತ್ತದೆ.

ಇನ್ನು ಕುಡಿಯುವ ನೀರಿನ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದರು, ಅವರಿಗೆ ಬೇಕಾದವರಿಗೆ ಡಿವಿಷನಲ್ ಕಮಿಷನರಿಂದ ಏಕ್‌ದಂ ಗ್ರಾಂಟ್ ಕೊಡುತ್ತಾರೆ ಎಂದು, ಬಾಕಿಯವರಿಗೆ ನಿಮ್ಮ ನಿಮ್ಮ ಪಂಚಾಯಿತಿಯಿಂದ ದುಡ್ಡು ಕೊಟ್ಟರೆ ನೋಡೋಣ ಅನ್ನುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ೨–೩ ಗ್ರಾಮಗಳಿಗೆ ಗ್ರಾಂಟ್ ಕೊಡುವುದಕ್ಕೆ ಇನ್ನೂ ನೋಟಿಫಿಕೇಷನ್ ಮಾಡಿಲ್ಲ. ಮತ್ತು ಸ್ಯಾಂಕ್ಷನ್ ಆಗಿರುವ ಕೆಲಸ ಇನ್ನೂ ತೆಗೆದುಕೊಂಡಿಲ್ಲ. ಅವರು ಏನಾದರೂ ಕೇಳಿದರು ಇವರು ನಾಗರತ್ನಮ್ಮನ ಕಡೆಯವರು ಎಂದು ತಿಳಿದುಕೊಂಡು ಅವರ ತಲೆಯನ್ನೇ ಒಡೆದು ಹಾಕುತ್ತೀರಿ.

ಈಗ ಇನ್ನೊಂದು ವಿಷಯ ಹೇಳಬೇಕಾಗಿದೆ. ನಿನ್ನೆ ಮೊನ್ನೆಯವರೆಗೆಲ್ಲಾ, ಪಟ್ಟು, ಫೈಜಾಮ ಹಾಕಿಕೊಂಡಿರುವರು 'ಗೆಟ್ ರಿಚ್, ಕ್ವಿಕ್ ರಿಚ್' ಆಗುತ್ತಿದ್ದಾರೆ. ಈಗ ಬೇಗಬೇಗನೆ ಐಶ್ವರ್ಯವಂತರಾಗುತ್ತಿದ್ದಾರೆ ಅದಕ್ಕೂ ಒಂದುಕಾಲ ಬರುತ್ತದೆ. ತಿಂದಿರುವವರೆಲ್ಲಾ ಕಕ್ಕುವ ಕಾಲ ಬರುತ್ತದೆ. ಅಲ್ಲಿಯವರೆಗೂ ಸುಧಾರಣೆ ಬರುವುದಿಲ್ಲ. ಹೇಗೆ ತಿಂದಿದ್ದಾರೋ ಹಾಗೆಯೇ ರಕ್ತ ವಾಂತಿಯಾಗಿ ಕಕ್ಕುವ ಕಾಲ ಬರುತ್ತದೆ. ಈ ಐಶ್ವರ್ಯವಂತರೆಲ್ಲಾ ಸಿನೇಮಾ ಕಟ್ಟುವುದು, ಮಹಡಿ ಮನೆ ಕಟ್ಟುವುದು ಹೀಗೆ ಮಾಡುತ್ತಾ ಇದ್ದಾರೆ. ಇನ್ನು ಜನರಿಗೆ ಮೋಸ ಮಾಡುವ ಕಾಲ ಹೋಯಿತು ಇನ್ನು ಮುಂದೆ ಬರುವ ಕಾಲ ಬಹಳ ಕಷ್ಟ. ಜನ ಇದನ್ನೆಲ್ಲಾ ಕಾದು ನೋಡುತ್ತಾ ಇದ್ದಾರೆ. ಸೆಂಟ್ರಲ್ ಗೌರ್ನಮೆಂಟ್‌ನವರು ನಿಮಗೆ ದುಡ್ಡು ಕೊಡಬೇಕಾದರೆ ಸುಮ್ಮನೆ ಕೊಡಬಾರದು. ಅವರು ಹಾಗೇನಾದರೂ ಕೊಟ್ಟರೆ ಪಾಪ ಮಾಡಿದೆ ಹಾಗಾಗುತ್ತದೆ. ಗೌರ್ನಮೆಂಟ್ ತಾವೇ ಹಕ್ಕುದಾರರೆಂದು ಈ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆಯೋ ಅದನ್ನು ತಾವು ಜನಗಳಿಗೆ ಕೊಡದೆ ಮೋಸ ಮಾಡುತ್ತಿದ್ದೀರಿ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೊನೆಯದಾಗಿ ನಾನು ಒಂದು ಮಾತನ್ನು ಹೇಳಬೇಕಾದರೆ ನಮ್ಮ ದೇಶದಲ್ಲಿ ಪ್ರಾಣಕ್ಕೆ ಅಷ್ಟು ಮೌಲ್ಯ ಕೊಟ್ಟಿಲ್ಲ ಸತ್ತುಹೋದರೆ ಹೋಗುತ್ತಾನೆ, ಇದ್ದರೆ ಇರುತ್ತಾನೆ, ಅಂತ ಅಷ್ಟು ಉದಾಸೀನದಿಂದ ಇರುತ್ತಾರೆ. ನಿನ್ನೆ ದಿವಸ ಕೌನ್ಸಿಲ್‌ನಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ರಾಚಯ್ಯನವರು ಮೈಸೂರಿನಲ್ಲಿ ನಡೆದ ಒಂದು ಘಟನೆಯ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ನಮ್ಮ ಮೈಸೂರಿನಲ್ಲಿ ಸರ್ಟಿಫೈಡ್ ಸ್ಕೂಲ್‌ನಲ್ಲಿ ೧೧೭ ಮಕ್ಕಳು ಇದ್ದರು. ಅದರಲ್ಲಿ ೪ ಮಕ್ಕಳು ವಿಷ್‌ದಮ್ ಸತ್ತು ಹೋದರು. ಅದು ಯಾರಿಗೂ ಗೊತ್ತಿಲ್ಲವೇ? ಅಲ್ಲಿರುವ ಆಹಾರ ಪದಾರ್ಥಗಳಲ್ಲಿ ಇನ್‌ಸೆಕ್ಟಿಸೈಡ್ ಬೆರೆಸಿದ್ದರಿಂದ ಅವರು ಸತ್ತಿದ್ದಾರೆ. ಅದನ್ನು ಹಷ್‌ಅಪ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಹೀಗೆ ಇರತಕ್ಕಂಥ ಸರಕಾರದಲ್ಲಿ ಬಂದಾವೇಳೆ ನನ್ನನ್ನು ಕಂಡರೆ ನಿಮಗೆ ಆಗದೇ ಹೋದರೆ ಅಂಥವರನ್ನು ಮುಗಿಸಿಬಿಡುವುದು, ಪುಟ್ಟಸಾಮಿಯವರನ್ನು ಕಂಡರೆ ನಿಮ್ಮಲ್ಲಿರುವ ಹಿಂಬಾಲಕರಿಗೆ ಆಗುವುದಿಲ್ಲ, ರಾಜಶೇಖರಮೂರ್ತಿಯವರನ್ನು ಕಂಡರೆ ಮತ್ತೊಬ್ಬರಿಗೆ ಆಗುವುದಿಲ್ಲ. ಇದನ್ನು ನಿಮ್ಮ ಹಿಂಬಾಲಕರು ಯೋಚನೆ ಮಾಡಿ ಅಂಥವರನ್ನು ಮುಗಿಸಿಬಿಡುವುದು. ಹೀಗಾದರೆ ಅವರು ಈ ರಾಜ್ಯದಲ್ಲಿ ಹೇಗೆ ಬಾಳಬೇಕೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಕೇಳುವವರು ಯಾರೂ ಇಲ್ಲವೇ? ಇದನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಇನ್ನು ಸ್ವಲ್ಪ ದಿವಸ ಕಳೆದರೆ ನಾವು ಸತ್ತು ಹೋಗುವುದಕ್ಕೂ, ನಿಮ್ಮ ಪರ್ಮಿಷನ್, ಮತ್ತು ಇನ್‌ಫ್ಲೂಯೆನ್ಸ್ ಬೇಕಾಗಬಹುದು. ನಿಮ್ಮ ಹಿಂದೆ ಏನಿದೆ ಎಂದು ನೋಡುವುದಿಲ್ಲ. ನಮ್ಮನ್ನು ಇಂತಹ ಕಷ್ಟಕ್ಕೆ ಬಿಟ್ಟುಕೊಡಬೇಡಿ. ಇಂತಹ ದುಷ್ಕಾಲದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇರುವಾಗ ನಮ್ಮ ತಾಲ್ಲೂಕಿನಲ್ಲಿ ನಾನು ಹೇಗೆ ಇರಲಿ? ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಂಚೇಗೌಡ: (ಮದ್ದೂರು) ಸನ್ಮಾನ್ಯ ಸಭಾಪತಿಗಳೇ, ಕಳೆದ ೫ ವರ್ಷಗಳಿಂದಲೂ ಕೂಡ ನಮ್ಮ ರಾಜ್ಯದಲ್ಲಿ ಸತತವಾಗಿ ಉದ್ಭವಿಸಿರತಕ್ಕಂಥ ಅಭಾವ ಪರಿಸ್ಥಿತಿ ಬಗ್ಗೆ ಅನೇಕ ಜನ ಮಿತ್ರರು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ನನಗೆ ಇರತಕ್ಕಂಥ ಸ್ವಲ್ಪ ವೇಳೆಯಲ್ಲಿ ಈ ಅಭಾವ ಪರಿಸ್ಥಿತಿಯನ್ನು ಎದುರಿಸತಕ್ಕ ಬಗ್ಗೆ ಇದುವರೆಗೆ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ ಮತ್ತು ಮುಂದೆ ಏನು ಕಾರ್ಯ ಕ್ರಮ ಹಾಕಿಕೊಂಡಿದೆ ಎನ್ನುವ ಬಗ್ಗೆ ನನ್ನ ಅಭಿಪ್ರಾಯವನ್ನೂ ಕೂಡ ಈ ಸಭೆಯ ಮುಂದೆ ಇಡಲಿಕ್ಕೆ ಇಚ್ಛೆಪಡುತ್ತೇನೆ ಈ ಬಗ್ಗೆ ಏನು ಕಾನೂನು ಅಸ್ತಿತ್ವದಲ್ಲಿದೆ ಅದರ ಬಗ್ಗೆ ಬಹುಶಃ ಸ್ಥಳೀಯ ಅಧಿಕಾರಿಗಳು ತೀವ್ರವಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಒಂದು ಘನ ಉದ್ದೇಶದಿಂದ ಸರ್ಕಾರದವರು ಅನೇಕ ಅಧಿಕಾರಗಳನ್ನು ಡೆಲಿಗೇಟ್ ಮಾಡಿದ್ದಾರೆ ಈಗ್ಗೆ ೨-೩ ವರ್ಷದ ಇತ್ತೀಚಿನ ಅನುಭವವನ್ನು ತೆಗೆದುಕೊಂಡು ಹೇಳುವುದಾದರೆ ಸರ್ಕಾರ ಏನು ಡೆಲಿಗೇಟ್ ಮಾಡಿದ್ದಾರೆ 'ಆ ಅಧಿಕಾರವನ್ನು ಉಪಯೋಗಿಸಿಕೊಂಡು ಜಿಲ್ಲಾಮಟ್ಟದ ಅಧಿಕಾರಿಗಳು ನೊಂದಿರತಕ್ಕ ಜನಗಳಿಗೆ ತ್ವರಿತವಾದ ಸೌಲಭ್ಯಗಳನ್ನು ಕೊಡುತ್ತಾ ಇಲ್ಲ. ಈ ಸಾರಿ ಅಭಾವ ಪರಿಸ್ಥಿತಿ ಬಂದ ಸಂದರ್ಭದಲ್ಲಿ ಅನೇಕ ಸಾರಿ ಆಯಾಯಾ ಜಿಲ್ಲಾ ಪ್ರತಿನಿಧಿಗಳು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದರೂ ಕೂಡ ಅವರು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಅವರು ಕರ್ತವ್ಯ ಲೋಪ ಮಾಡಿದ ನಂತರ ಮಾನ್ಯ ಮಂತ್ರಿಗಳಾದ ಶ್ರೀ ಕೌಜಲಗಿಯವರ ಗಮನಕ್ಕೆ ತಂದಾಗ ಅವರು ಬಹಳ ಔದಾರ್ಯದಿಂದ, ಬಹಳ ಹುರುಪಿನಿಂದ ಅದಕ್ಕೆ ಅವರು ಏನೇನು ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕೋ ಅದನ್ನು ತೆಗೆದುಕೊಂಡರು. ಇಂತಹ ಆರಿತ ನುರಿತ ಮಂತ್ರಿಗಳು ಆಗಿನಿಂದಲೂ ಇದ್ದಿದ್ದರೆ ಇಲ್ಲಿಯವರೆಗೆ ಇಷ್ಟರಮಟ್ಟಿಗೆ ಆಹಾರ ಅಭಾವ ಬರುತ್ತಿರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿವರ್ಷ ಅನೇಕ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಆದರೆ ಶಾಶ್ವತವಾದ ಒಂದು ಪರಿಹಾರದ ಕಾರ್ಯಕ್ರಮದ ಬಗ್ಗೆ ಏನು ಒಂದು ಕ್ರಮವನ್ನೂ ತೆಗೆದುಕೊಂಡಿಲ್ಲ. ಪ್ರತಿವರ್ಷ ಈ ಸದನದಲ್ಲಿ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ಅನೇಕ ಜನರು ಇಟ್ಟಂಥ ಸಲಹೆಗಳನ್ನು ಇನ್ನೂ ಕಾರ್ಯಗತ ಮಾಡಿಲ್ಲ. ವರ್ಷೇ ವರ್ಷೇ ಈ ಪರಿಹಾರ ಕೆಲಸಗಳಿಗಾಗಿ ೫ ಕೋಟಿ, ೧೦ ಕೋಟಿ ರೂಪಾಯಿಗಳು ಖರ್ಚಾಗುತ್ತಾ ಇದೆ ಎಂದು ಹೇಳುತ್ತಿದ್ದೀರಿ. ಈ ಹಂಗಾಮಿ ಕೆಲಸಕ್ಕೆ ದುಡ್ಡು ಕೊಡುತ್ತಾ ಬಂದಿದ್ದೀರಿ. ಈ ರೀತಿ ಪ್ರತಿ ವರ್ಷವೂ ೧೦-೧೫ ಕೋಟಿ ರೂಪಾಯಿ ಕೊಡುತ್ತಾ ಹೋದರೆ ಇನ್ನು ಎಷ್ಟು ವರ್ಷ ಆದಮೇಲೆ ಒಂದು ಶಾಶ್ವತ ಪರಿಹಾರವನ್ನು ತೆಗೆದುಕೊಳ್ಳಲು ಸಾಧ್ಯ? ಇದನ್ನು ಯೋಜನೆ ಮಾಡಿ. ಮಾನ್ಯ ಸದಸ್ಯರೊಬ್ಬರು ಕುಡಿಯುವ ನೀರಿನ ಬಗ್ಗೆ ಹೇಳಿದರು. ಸರ್ಕಾರದ ಹುಕುಂಗಳು ಬಂದಿರುವುದೆಲ್ಲಾ ನೋಡಿದರೆ ಸರ್ಕಾರದ ಉದ್ದೇಶ ಏನು ಎಂದು ಅದನ್ನು ಕಾರ್ಯಾಚರಣೆ ಯಲ್ಲಿ ತರುವುದಕ್ಕೋಸ್ಕರ ಒಂದು ಸರ್ಕುಲರ್‌ನ್ನು ಇಷ್ಯೂ ಮಾಡುತ್ತಾರೆ. ಆದರೆ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಮಾಡುತ್ತಾ ಇರುವುದನ್ನು ನೋಡಿದರೆ ಸರ್ಕಾರದ ಅಭಿಪ್ರಾಯ ಏನು ಇದೆಯೋ ಅದರ ತದ್ವಿರುದ್ಧವಾಗಿದೆಯೆಂದು ನಾವು ಹೇಳಬೇಕಾಗಿದೆ.

ಕಳೆದ ವರ್ಷ ೧೩ನೇ ಜೂನ್ ೧೯೬೯ರಲ್ಲಿ ಅಭಿವೃದ್ಧಿ ಶಾಖೆಯ ಸೆಕ್ರೆಟೇರಿಯಟ್‌ನಿಂದ ಒಂದು ಸರ್ಕ್ಯುಲರ್ ಬಂದಿದೆ. ಅದರ ಪ್ರಕಾರ ಯಾವ ಊರಿನಲ್ಲಿ ಇದುವರೆಗೆ ಸರ್ಕಾರಿ ಬಾವಿ ಇಲ್ಲ, ಅಂಥ ಕಡೆ ಮಾತ್ರ ಬಾವಿಗಳನ್ನು ತೋಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ; ಉಳಿದ ಕಡೆ ಬಾವಿ ತೆಗೆಯುವ ಹಾಗೆ ಇಲ್ಲ. ಸಾವಿರಾರು ಜನರಿರುವ ಗ್ರಾಮಗಳಲ್ಲಿ ೫೦-೬೦ ಅಡಿ ಆಳವಿರುವ ಬಾವಿಗಳಲ್ಲಿ ನೀರಿಲ್ಲದೆ ಇರುವ ಸಂದರ್ಭದಲ್ಲಿ ಕೂಡ ಮತ್ತೊಂದು ಬಾವಿಯನ್ನು ತೆಗೆಯಕೂಡದು ಎನ್ನುವ ಆಜ್ಞೆ ಮಾಡುವುದು ಸರ್ಕಾರಕ್ಕೆ ಸೂಕ್ತವಾಗಿದೆಯೇ? ಸರ್ಕಾರದ ಉದ್ದೇಶವೇನ್ನು, ಕಾರ್ಯಾಚರಣೆ ಮಾಡುತ್ತಿರುವುದು ಏನು ಎನ್ನುವುದನ್ನು ಯಾರೂ ನೋಡುತ್ತಿಲ್ಲವೆಂದರೆ ಯಾರಿಗಾದರೂ ಬೇಸರವಾಗುತ್ತದೆ. ಈಗಲಾದರೂ ಕೆಂಡಾಯ ಮಂತ್ರಿಗಳು ಸರ್ಕಾರಿ ಸರ್ಕ್ಯುಲರ್ ಏನಿದೆ ಅದನ್ನು ವಾಪಸು ತೆಗೆದುಕೊಳ್ಳುವಂತೆ ಮಾಡತಕ್ಕುದು ಅವಶ್ಯಕವಾಗಿದೆ.

ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ತೋಡಿಸತಕ್ಕ ಅಧಿಕಾರ ವಿತ್ತು. ಪೆಡ್ಡೊಲ್ ಆಫ್ ರೇಟ್ ಕಡಿಮೆ ಇದ್ದು ಕಂಟ್ರಾಕ್ಟರುಗಳು ಬಾವಿ ಕೆಲಸಕ್ಕೆ ಮುಂದೆ ಬರುವುದಿಲ್ಲ. ಅಂಥ ಸಂದರ್ಭಗಳಲ್ಲಿ ತಾಲ್ಲೂಕು ಬೋರ್ಡಿನವರು ತಮ್ಮ ಇಂಪ್ಲಾಯೆನ್ಸ್ ಉಪಯೋಗಿಸಿ ಅಲ್ಲಲ್ಲಿ ಬಾವಿಗಳನ್ನು ತಕ್ಕಮಟ್ಟಿಗೆ ಮಾಡಿಸಿಕೊಂಡು ಬರುತ್ತಿದ್ದರು. ಈಚೆಗೆ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಇಲಾಖೆಯವರು ಬಾವಿಗಳನ್ನು ತೋಡಿಸಬೇಕೆಂದು ಮತ್ತೊಂದು ಸರ್ಕ್ಯುಲರನ್ನು ಕೊಟ್ಟಿದ್ದಾರೆ. ಇದೆಲ್ಲವನ್ನೂ ನೋಡಿದರೆ ರೈತಾಪಿ ಜನರ ಕಷ್ಟವನ್ನು ಅರಿತ ವ್ಯಕ್ತಿಗಳು ಇಲ್ಲವೋ ಏನೋ ಎಂದು ನನಗನ್ನಿಸುತ್ತದೆ. ಒಂದು ಕಡೆ ಕುಡಿಯುವ ನೀರಿನ ಸೌಲಭ್ಯವನ್ನು ಹೆಚ್ಚು ಮಾಡಬೇಕೆಂದು ಹೇಳುತ್ತ ಮತ್ತೊಂದು ಕಡೆ ಕುಡಿಯುವ ನೀರಿನ ಸೌಲಭ್ಯ ಮಾಡಿಕೊಡುವುದಕ್ಕೆ ಮುಟ್ಟುಗೋಲು ಹಾಕುವುದೇನು? ರೈತರಿಗೆ ಅನುಕೂಲವಾಗಬೇಕಾದರೆ ತಾಲ್ಲೂಕು ಬೋರ್ಡುಗಳಿಗೆ ಬಾವಿಗಳನ್ನು ಮಂಜೂರು ಮಾಡತಕ್ಕ ಅಧಿಕಾರ ವೇನಿತ್ತು ಅದು ಉಳಿಯಲೇಬೇಕು.

ಹಳ್ಳಿಗಳಲ್ಲಿ ಜನರಿಗೆ ಉದ್ಯೋಗವನ್ನು ದೊರಕಿಸಿಕೊಡಬೇಕು. ಆಗ ಮಾತ್ರ ಕ್ಷಾಮವನ್ನು ನಿಜವಾಗಿಯೂ ತಡೆಗಟ್ಟುವುದಕ್ಕೆ ಸಾಧ್ಯ. ಈಗ ಕೊಡತಕ್ಕ ಕೂಲಿ ಪ್ರಕಾರ ನಾಮಿನಲ್ ರೋಲ್ ಮಾಡಿಕೊಂಡು ರಸ್ತೆ ಮಾಡುವುದು, ಗೋಕಟ್ಟೆ ಕೆಲಸ ಮಾಡುವುದು. ಇವನ್ನೆಲ್ಲ ಮಾಡುತ್ತಿದ್ದಾರೆ. ಬಹುಶಃ ನಮಗೆ, ನಿಮಗೆ ಎಲ್ಲರಿಗೂ ಗೊತ್ತಿರುವ ಹಾಗೆ ಮಾನ್ಯ ಮಂತ್ರಿಗಳಿಗೆ ಕೂಡ ಗೊತ್ತಿರಬಹುದು, ಎಲ್ಲಿಯೂ ಕೂಡ ನಾಮಿನಲ್ ರೋಲ್ ಮೇಲೆ ಕೆಲಸಗಳಾಗುತ್ತಿಲ್ಲ ಬಿಲ್ ತಯಾರು ಮಾಡಲು ಹೆಬ್ಬೆಟ್ಟು ಒತ್ತಿಸಿಕೊಳ್ಳುತ್ತಾರೆ. ಮರಾ ಮತ್ತು ಇಲಾಖೆ ತಯಾರು ಮಾಡುವ ಅಂದಾಜುಗಳಿಗೆ ತಕ್ಕ ಹಾಗೆ ನಾಮಿನಲ್ ರೋಲ್‌ಗಳನ್ನು ತಯಾರು ಮಾಡುತ್ತಾರೆ. ಈ ಡಬಲ್ ಡ್ಯೂಟಿ ಏಕೆ? ಮರಾ ಮತ್ತು ಇಲಾಖೆ ಏನು ದರ ಕೊಟ್ಟಿದ್ದಾರೆ ಬಹುಶಃ ಅದು ಸಾಕಾಗುತ್ತದೆ ಅದೇ ದರದ ಪ್ರಕಾರ ಕಂಟ್ರಾಕ್ಟರಿಗೆ ಯಾವುದೋ ರಸ್ತೆ ಕೆಲಸ, ಬಾವಿ ಕೆಲಸ ಇಂಥವುಗಳನ್ನು ಕೊಟ್ಟರೆ ಈಗ ನಡೆಯುತ್ತಿರುವಂಥ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ.

ನೀರಾವರಿ ಬಾವಿಗಳ ವಿಚಾರ—ಮೂರು, ನಾಲ್ಕು ವರ್ಷಗಳ ಹಿಂದೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಅಧಿಕಾರವಿದ್ದು ಅವರು ನೀರಾವರಿ ಬಾವಿಗಳನ್ನು ಮಂಜೂರು ಮಾಡುತ್ತಿದ್ದರು ಮತ್ತು ಬಾವಿಗಳನ್ನು ತೋಡಿಸುವುದಕ್ಕೆ ಸಾಕಷ್ಟು ಸಿಬ್ಬಂದಿ ಇದ್ದು ಟೆಕ್ನಿಕಲ್ ನೋ ಹೌ ಕೊಡುತ್ತಿದ್ದರು. ೧೦-೧೫ ದಿವಸಗಳಿಗೆ ಒಂದುಸಲ ಅವರಿಗೆ ಬೇಕಾದ ದುಡ್ಡು ಕೊಡುತ್ತಿದ್ದರು. ಈಚೆಗೆ ಇದನ್ನು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ವಹಿಸಿಕೊಟ್ಟರು. ಇದರಿಂದೇನಾಯಿತು ಎಂದರೆ ರೈತರು ಬಹು ಭಾಗದ ದುಡ್ಡನ್ನು ಖರ್ಚು ಮಾಡಿಕೊಳ್ಳಬೇಕಾದ ಪ್ರಸಂಗ ಬಂದಿದೆ. ಹಳ್ಳಿಗಾಡಿನ ಜನರಿಗೆ ಹಣದ ಅಗತ್ಯ ಬಹಳವಿರುತ್ತದೆ. ಅವರಿಗೆ ಬರುವ ದುಡ್ಡಿನಲ್ಲಿ ಬಹು ಭಾಗವನ್ನು ಅಲ್ಲಿಯೇ ಖರ್ಚು ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಯಾರಿಗೂ ಬಾವಿ ಕೆಲಸ ಪೂರ್ತಿಯಾಗುತ್ತಿಲ್ಲ.

ಬೆಂಗಾಡು ಪ್ರದೇಶದಲ್ಲಿ ಜನರ ಕಷ್ಟವನ್ನು ಹೋಗಲಾಡಿಸಬೇಕಾದರೆ ಫ್ಯಾಮಿನ್ ರಿಲೀಫ್ ಬೋರ್ಡ್ ಮಾಡಬೇಕು ಎಂದು ಕೆಲವರು ಸಲಹೆ ಮಾಡಿದ್ದಾರೆ. ರಾಜ್ಯ ಮಟ್ಟದಲ್ಲಿ ಅಧಿಕಾರಿಗಳಿಂದ ಕೂಡಿದ ಅಥವಾ ಸರ್ಕಾರದಿಂದ ನಾಮಕರಣ ಮಾಡಿದ ಸದಸ್ಯರಿಂದ ಕೂಡಿದ ಬೋರ್ಡ್ ಬೇಡ ಯಾರು ಜನರಿಂದ ವೋಟು ತೆಗೆದುಕೊಂಡು ಬಂದಿದ್ದಾರೆ ಅಂಥವರಿಂದ ಕೂಡಿದ ತಾಲ್ಲೂಕು ಬೋರ್ಡ್ ಕಂ ರಿಲೀಫ್ ಬೋರ್ಡ್ ಎಂದು ಮಾಡಿ. ಹಣ ಏನು ಖರ್ಚು ಮಾಡುತ್ತೀರಿ ಅದನ್ನು ಅವರಿಗೆ ಷೇರ್ ಕ್ಯಾಪಿಟಲ್ ಆಗಿ ಕೊಡಿ. ಕಾನೂನು ಬದಲಾವಣೆ ಮಾಡಿ ಬ್ಯಾಂಕುಗಳಿಂದ ಸಾಲವನ್ನು ಎತ್ತುವ ಅಧಿಕಾರವನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಡಿ. ಜಿಯಲಾಜಿಕಲ್ ಇಲಾಖೆಯ ಅಥವಾ ಬೇರೆ ಒಂದು ಟೀಮ್ ಗೊತ್ತು ಮಾಡಿ ಪ್ರತಿಯೊಂದು ಕಡೆಯೂ ಸರ್ವೆ ನಡೆಸಿ. ಎಲ್ಲೆಲ್ಲಿ ಬಾವಿ ತೊಡುವುದಕ್ಕೆ ಸಾಧ್ಯವಿದೆ ಎಂದು ತಿಳಿದುಕೊಂಡು, ತಾಲ್ಲೂಕು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಬೋರ್ಡಿಗೆ ಬಾವಿ ಕೆಲಸ- ಪಂಪ್‌ಸೆಟ್ ಕೊಡುವುದು, ಪೈಪ್ ಕೊಡುವುದು ಎಲ್ಲ ಕೆಲಸವನ್ನೂ ವಹಿಸಿ ಅಕಸ್ಮಾತ್ತಾಗಿ ಎಲ್ಲಿಯಾದರೂ ಅವರು ಮಾಡುವ ಕೆಲಸ ಯಶಸ್ವಿಯಾಗದೆ ಹೋದರೆ ಅಂಥ ಕಡೆಗಳಿಗೆ ಸಬ್ಸಿಡಿ ರೂಪದಲ್ಲಿ ಹಣವನ್ನು ಕೊಡುವ ಹಾಗೆ ಮಾಡಿದರೆ ನಾಲ್ಕೈದು ವರ್ಷದಲ್ಲಿ ನೀರಾವರಿ ಬಾವಿಗಳನ್ನು ತೊಡುವುದಕ್ಕೆ ಸಾಧ್ಯವಿದೆ. ಆಗ ರೈತರು ತಮ್ಮ ಕಾಲ ಮೇಲೆ ತಾವು ನಿಂತು ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ಗೋಕಟ್ಟೆಗೆ, ರಸ್ತೆಗೆ, ದುಡ್ಡು ಕೊಡುತ್ತೇವೆಂದರೆ ರಾಜ್ಯದಲ್ಲಿ ದುಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ರಿಲೀಫ್ ಬೋರ್ಡ್ ಬೇಡ, ಏನೂ ಬೇಡ. ತಾಲ್ಲೂಕು ಬೋರ್ಡ್ ಚುನಾಯಿತವಾದ ಮಂಡಳಿ. ಅವರಿಗೆ ಜನರ ಕಷ್ಟ ಗೊತ್ತಿದೆ, ಜನರ ದುಸ್ಥಿತಿ ಗೊತ್ತಿದೆ; ತಮ್ಮ ಜವಾಬ್ದಾರಿ ಗೊತ್ತಿದೆ. ಅವರು ಜವಾಬ್ದಾರಿಯಿಂದ ವರ್ತಿಸಿದರೆ ಜನರು ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ; ಅದಕ್ಕೆ ಅವಕಾಶವಿದೆ.

ಈಗ ಇಷ್ಟೋ ಇಷ್ಟೋ ಮಳೆಯಾಗಿದ್ದರೂ ಕೂಡ ಮುಂದಿನ ವರ್ಷ ಫಸಲು ಕೈಗೆ ಸಿಕ್ಕುವುದಿಲ್ಲ. ಕ್ಷಾಮ ಪರಿಹಾರ ಕೆಲಸವನ್ನು ಈಗ ಸ್ವಲ್ಪಮಟ್ಟಿಗೆ ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಮಾತು ಕೇಳದೆ ಈ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾನು ಹೇಳತಕ್ಕ ಅಭಿಪ್ರಾಯವನ್ನು ಸ್ವಲ್ಪ ಗಮನವಿಟ್ಟು ಕೇಳಿ, ಕ್ಷಾಮ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಕ್ರಮ ತೆಗೆದುಕೊಳಿ. ಕ್ಷಾಮ ಪರಿಹಾರ ಸಂಬಂಧದಲ್ಲಿ ಈ ಸದನದ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ ಅವರಿಂದ ವರದಿಯನ್ನು ತೆಗೆದುಕೊಂಡು ತಕ್ಷಣ ಹಳ್ಳಿಗಳಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸಿ ಅವರು ಜೀವನ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕಾಗಿದೆ. ಸರ್ಕಾರ ೫-೧೦ ಕೋಟಿ ರೂಪಾಯಿಗಳನ್ನು ಪರಿಹಾರ ಕಾರ್ಯಗ್ಳಿಗಾಗಿ ಒದಗಿಸುವುದು ತಪ್ಪಬೇಕಾದರೆ ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕು.

ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಿದ್ದಾರೆ. ಎಷ್ಟೋ ಕಡೆ ಲಿಫ್ಟ್ ಇರಿಗೇಷನ್ ಸೊಸೈಟಿ ಎಂದು ಮಾಡಿಕೊಂಡಿದ್ದೇವೆಂದು ತೋರಿಸುತ್ತಾರೆ. ಯಾವ ಸೊಸೈಟಿಯೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಅದಕ್ಕಾಗಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಹಾಕುವುದಕ್ಕೆ ಸಾಧ್ಯವಿದೆ ಅವುಗಳನ್ನು ಕ್ರಮಬದ್ಧವಾಗಿ ತಾವೇ ತೆಗೆದುಕೊಂಡು ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಮಾಡಿ ಜನಗಳಿಂದ ಅದಕ್ಕಾಗಿ ತಗಲುವ ವೆಚ್ಚಕ್ಕಾಗಿ ಕಾಂಟ್ರಿಬ್ಯೂಷನ್ ರೂಪದಲ್ಲಿ ಹಣವನ್ನು ವಸೂಲ್ಮಾಡಿದರೆ, ಏನು ಹಣವನ್ನು ಈ ಯೋಜನೆಗೆ ಖರ್ಚು ಮಾಡಲಾಗುತ್ತದೆಯೋ ಅದು ವಾಪಸು ಕೂಡ ಬರುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

† ಶ್ರೀ ವಿ. ಎನ್. ಪಾಟೀಲ್(ಹುಮ್ನಾಬಾದ್) :— ಈ ಕ್ಷಾಮ ಪರಿಸ್ಥಿತಿಯ ಬಗ್ಗೆ ವರ್ಷೇ ವರ್ಷೇ ನಾವು ಈ ಮನೆಯಲ್ಲಿ ಚರ್ಚೆಮಾಡುತ್ತಿದ್ದೇವೆ. ಕ್ಷಾಮ ಪರಿಹಾರಕ್ಕಾಗಿ ಪ್ರತಿ ವರ್ಷ ೪-೫ ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದು ಖಾಯಮಾಗಿ ನಡೆಯುತ್ತಿದೆ. ಪ್ರತಿ ವರ್ಷ ಎಷ್ಟುಮೂರು ದಿವಸ ಇದರ ಬಗ್ಗೆ ಚರ್ಚೆ ನಡೆಯುವುದು ನಿರ್ಧಾರವಾದಂತೆ ಆಗಿದೆ. ಸರ್ಕಾರ ಈ ಬಗ್ಗೆ ಏನು ಮಾಡಿದೆ ಎಂದು ನೋಡುವುದಾದರೆ ನಿರಾಶೆಯಾಗುವುದು ಕ್ಷಾಮವನ್ನು ತಡೆಗಟ್ಟುವುದಕ್ಕೆ ಶಕ್ತಿಯಿದ್ದರೂ ಕೂಡ ಪ್ರಕೃತಿಯ ಮೇಲೆ ದೂರು ಹೇರಿಸುವ ಕೆಲಸ ನಡೆದಿದೆ. ದೇಶದಲ್ಲಿ ಎಷ್ಟೋ ಹಳ್ಳಗಳು ಹರಿಯುತ್ತವೆ, ಅವುಗಳ ನೀರನ್ನು ಉಪಯೋಗಿಸಿಕೊಳ್ಳಲು ಸಹಾಯವಾಗುವಂತೆ ೩-೪ ಮೈಲಿಗಳಿಗೊಂದರಂತೆ ಪಿಕಪ್ ಕಟ್ಟಿ, ಲಿಫ್ಟ್ ಇರಿಗೇಷನ್ ಮಾಡಲು ಅವಕಾಶವಿರುವ ಕಡೆ ನದಿದಡಗಳಲ್ಲಿ ಅನುಕೂಲಮಾಡಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಹಾಗೆ ಮಾಡಿ ಮಳೆಗಾಲದಲ್ಲಿ ಹರಿಯುವ ನೀರನ್ನು ಸದುಪಯೋಗಮಾಡಿಕೊಂಡಿದ್ದರೆ ಎಷ್ಟೋ ಬೆಳೆಗೆ ಅನುಕೂಲವಾಗುತ್ತಿತ್ತು. ವ್ಯರ್ಥವಾಗುತ್ತಿರುವ ನೀರಿನ ಸದುಪಯೋಗ ಮಾಡಿಕೊಂಡಿದ್ದರೆ ಇಂದು ಕ್ಷಾಮ ಬರುವುದಕ್ಕೆ ಇಷ್ಟು ಅವಕಾಶವಿರುತ್ತಿರಲಿಲ್ಲ. ಜಪಾನಿಗೆ ಎಕ್ಸ್‌ಪೋ-೭೦ ನೋಡಲು ಇಲ್ಲಿನವರನ್ನು ಕಳಿಸಿದ್ದಕ್ಕೆ ಆದ ಖರ್ಚಿನಿಂದ ೧೦ ಪಿಕಪ್‌ಗಳನ್ನು ಕಟ್ಟಬಹುದಾಗಿತ್ತು. ಆದರಿಂದ ಜನತೆಗೆ ಎಷ್ಟೋ ಸಹಾಯವಾಗುತ್ತಿತ್ತು. ಆದರೆ ಹಾಗೆ ಅನುಕೂಲಮಾಡಲು ಮನಸ್ಸಿಲ್ಲ. ಹಾಗೆ ಮಾಡಿದ್ದರೆ ನಮ್ಮವರು ಕೆಲವರು ಬದುಕಲು ಸಹಾಯವಾಗುತ್ತಿತ್ತು. ಕ್ಷಾಮದ ಹೆಸರಿನಲ್ಲಿ ಮೂರು ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದನ್ನು ನೋಡಿದರೆ ಅದಕ್ಕೆ ತಕ್ಕಷ್ಟು ಕೆಲಸವಾಗುತ್ತಿಲ್ಲ, ಅದರಲ್ಲಿ ೭೫ ಲಕ್ಷ ರೂಪಾಯಿ ಜನರ ಉಪಯೋಗಕ್ಕೆ ಖರ್ಚಾಗಬಹುದು, ಉಳಿದ ಹಣವನ್ನು ಹೆಗ್ಗಣಗಳು ತಿಂದುಹಾಕುವುವು. ಮನುಷ್ಯರ ಕಷ್ಟ ಹೀಗಾದರೆ ಹೇಗೆ ಪರಿಹಾರವಾಗಬೇಕು ? ನಮ್ಮಲ್ಲಿ ಲಂಚಗುಳಿತನ ಹೇರಳವಾಗಿ ಬೆಳೆದಿದೆ. ಕ್ಷಾಮದ ಹೆಸರಿನಲ್ಲಿ ಖರ್ಚು ಮಾಡುವ ಹಣದ ಬಹುಭಾಗ ಯಾರೋ

ಬೇಕಾದವರ ಕಿಸೆಗೆ ಹೋಗುತ್ತಿದೆ. ಬೀದರ್ ಜಿಲ್ಲೆಯ ಅನೇಕ ಭಾಗಗಳಲ್ಲಿ ಈಚೆಗೆ ಮಳೆಯಿಂದ ಹಾನಿಯಾಗಿದೆ, ಮುಂದೆ ಜೋಳ ಬಿತ್ತಲು ಸಾಧ್ಯ ಇಲ್ಲದಂತಾಗಿದೆ. ಇಡೀ ಜಿಲ್ಲೆಯ ಅರ್ಧಭಾಗದಲ್ಲಿ ಜೋಳ ಬಿತ್ತಲು ಸಾಧ್ಯವಿಲ್ಲ. ಒಂದು ವಾರದೊಳಗೆ ಬಿತ್ತನೆ ಮಾಡದಿದ್ದರೆ ಮುಂದೆ ಬಿತ್ತಲು ಸಾಧ್ಯವಾಗುವುದಿಲ್ಲ. ಇಂಥ ಪರಿಸ್ಥಿತಿ ಇರುವಾಗ ಸರಕಾರ ಆ ಬಗ್ಗೆ ಏನೂ ಹೇಳುತ್ತಿಲ್ಲ. ದೇವರ ದಯಾ ಬರಲಿಲ್ಲ, ನಾವು ಮನುಷ್ಯರು ಏನು ಮಾಡಲು ಸಾಧ್ಯ ಎಂದು ಹೇಳುವರು. ಹೀಗೆ ದೇವರ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಮೂರು ಕೋಟಿ ರೂಪಾಯಿ ಖರ್ಚುಮಾಡುತ್ತೇವೆಂದು ಹೇಳಿ ಬೇಕಾದವರಿಗೆ ಕಂಟ್ರಾಕ್ಟ್ ಕೊಟ್ಟು ಅವರಿಗೆ ಅನುಕೂಲವಾಗುವಂತೆ ಮಾಡುವರು, ಆಫೀಸರುಗಳು ಲಂಚ ಪಡೆಯುವರು. ರೈತನಿಗೆ ಒಂದು ಸಾವಿರ ಸಾಲ ಕೊಟ್ಟರೆ ಅವನ ಕೈ ಸೇರುವುದು ೫೦ ರೂಪಾಯಿ ಮಾತ್ರ. ಇದು ಖಾಯಂ ರೆಮಿಡಿಯಾಗಿದೆ ಹೀಗೆ ದುರುಪಯೋಗವಾಗುತ್ತಿದೆ. ಇಂದು ನಮ್ಮ ರಾಜ್ಯವಲ್ಲಿ ಬೇಕಾದಷ್ಟು ಭೂಮಿಯಿದೆ, ಅದರ ಸದುಪಯೋಗವಾಗುತ್ತಿಲ್ಲ. ಆದೇ ಆಂಧ್ರವಲ್ಲಿ ಬೆಟ್ಟದ ಕಲ್ಲನ್ನು ಪುಡಿಮಾಡಿ ಅದರಿಂದ ಬಂದ ಮಣ್ಣನ್ನು ಗದ್ದೆಗೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಆ ಜಾಗದಲ್ಲಿ ಗದ್ದೆ ಮಾಡುತ್ತಿದ್ದಾರೆ. ಪ್ರತಿ ಹಳ್ಳಿಯಲ್ಲೂ ಕೆರೆ ಕಟ್ಟಿದ್ದಾರೆ. ಆಂಧ್ರದಲ್ಲಿ ಹೆಚ್ಚು ರಸ್ತೆಗಳಲ್ಲ, ಇರಿಗೇಷನ್ ಹೆಚ್ಚಾಗಿದೆ, ಅದಕ್ಕಾಗಿ ಹೆಚ್ಚು ಖರ್ಚು ಮಾಡುತ್ತಿದ್ದಾರೆ. ೫ ವರ್ಷಗಳ ಹಿಂದೆ ಅವರು ಹೆಚ್ಚು ಇರಿಗೇಷನ್ನಿಗೆ ಖರ್ಚು ಮಾಡಿರುವುದರಿಂದ ಇಂದು ಅದರ ಉತ್ಪತ್ತಿ ಕಾಣುತ್ತಿದೆ. ಈಗಲೂ ಕೂಡ ಆಂಧ್ರದಲ್ಲಿ ವ್ಯವಸಾಯಕ್ಕೆ ಹೆಚ್ಚು ಖರ್ಚುಮಾಡುತ್ತಿದ್ದಾರೆ. ಅವರು ಅಕ್ಕಿಯನ್ನು ಬೇಕಾದಷ್ಟು ಬೆಳೆದು ಇತರ ದೇಶಗಳಿಗೆ ಕೊಡುತ್ತಿದ್ದಾರೆ. ನಮ್ಮಲ್ಲಿ ಹರಿಯುವ ನೀರು ಬೇಕಾದಷ್ಟಿದೆ, ನೈಸರ್ಗಿಕ ಸಂಪತ್ತಿದೆ. ಭೂಮಿ ಬೇಕಾದಷ್ಟಿದೆ. ರೈತರಿಗೆ ಬಾವಿ ಅನುಕೂಲತೆ ಮಾಡಿಕೊಟ್ಟಿದ್ದರೆ ಇಂದು ಬೇಕಾದಷ್ಟು ಬೆಳೆಯುತ್ತಿದ್ದರು, ಅಭಾವ ಪರಿಸ್ಥಿತಿ ಬರುತ್ತಿರಲಿಲ್ಲ. ಅಂಡರ್ ಗ್ರೌಂಡ್ ವಾಟರ್ ಸಹ ಬೇಕಾದಷ್ಟಿದೆ. ಅದನ್ನು ಕೂಡ ಸರಿಯಾಗಿ ಉಪಯೋಗಿಸುತ್ತಿಲ್ಲ.

೫ ಎಕರೆ ಭೂಮಿ ಇರುವವರು ಕೇಳಿದರೆ ಸಾಲ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವರು. ಷೆಡ್ಯೂಲ್ಡ್ ಬ್ಯಾಂಕುಗಳು, ರಾಷ್ಟ್ರೀಕರಣ ಮಾಡಲ್ಪಟ್ಟಿರುವ ಬ್ಯಾಂಕುಗಳು ಬೇಕಾದಷ್ಟಿದ್ದರೂ ಪರಿಸ್ಥಿತಿ ಹೀಗಿದೆ. ಕರ್ನಾಟಕದಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚು ಭಾಗದಲ್ಲಿ ಕ್ಷಾಮ ಬರುತ್ತಿದೆ. ಅಂಥ ಭಾಗಗಳಲ್ಲಿ ಖಾಯಂ ಪರಿಹಾರ ಕಾರ್ಯ ಮಾಡಬೇಕಾಗಿತ್ತು. ಆದರೆ ಹಾಗೆ ಮಾಡಿಲ್ಲ, ೩ ವರ್ಷಗಳಿಂದ ಕ್ಷಾಮ ಬರುತ್ತಿದೆ. ಮುಂದೆ ಕ್ಷಾಮ ಬಾರದಂತೆ ಒಂದು ಪ್ಲಾನು ಹಾಕಿ ಅದನ್ನು ಕಾರ್ಯರೂಪಕ್ಕೆ ತಂದಿದ್ದರೆ ಚೆನ್ನಾಗಿತ್ತು. ಕ್ಷಾಮದ ಹೆಸರಿನಲ್ಲಿ ಹಣ ದುರುಪಯೋಗವಾಗುತ್ತಿರುವುದರಿಂದ ಬಡವರ ಮನೆ ಮಾರ ಬೇಕಾದ ಪರಿಸ್ಥಿತಿ ಪ್ರಾಪ್ತವಾಗಿದೆ. ಅತಿವೃಷ್ಟಿ ಮತ್ತು ಅನಾವೃಷ್ಟಿ ಪ್ರಾಪ್ತವಾಗಿ ಕ್ಷಾಮ ಬಂದಿದೆ. ಸಾಧಾರಣವಾಗಿ ೨೨೦ ಕ್ವಿಂಟಾಲು ಧಾನ್ಯ ಮನೆಯಲ್ಲಿಟ್ಟಿರುತ್ತಿದ್ದವರಲ್ಲಿ ಇಂದು ೨ ಕ್ವಿಂಟಾಲು ಕೂಡ ಇಲ್ಲವಾಗಿದೆ. ಇರುವ ಅಲ್ಪ ಸ್ವಲ್ಪವನ್ನು ಕೂಡ ಮಾರಬೇಕಾಗಿದೆ. ರಾಸುಗಳಿಗೆ ಮೇವಿಗೆ ಕೂಡ ತೊಂದರೆಯಾಗಿದೆ. ಇಂಥ ಅನಾಹುತವಾಗಿರುವಾಗ ೨-೩ ಲಕ್ಷ ಕೊಟ್ಟರೆ ಏನುತಾನೆ ಅನುಕೂಲವಾದೀತು? ದುರುಪಯೋಗವಾಗುತ್ತಿರುವುದನ್ನು ನೋಡಿ ತಡೆಗಟ್ಟಲು ಲೋಕಲ್ ಕಮಿಟಿಗೆ ಅಧಿಕಾರ ಕೂಡ ಇಲ್ಲ. ಪ್ರಜಾಪ್ರಭುತ್ವವಿದ್ದರೂ ಜನರಿಗೆ ಸುಖಶಾಂತಿಯಿಲ್ಲ. ಒಂದೇ ಹಳ್ಳಿಯಲ್ಲಿ ಬೇರೆಬೇರೆ ಗುಂಪುಗಳಿವೆ, ಕೆಲವರಿಗೆ ಕೊಡಬಾರದೆಂದು ತಾಹಸಿಲ್ದಾರರು ಹೇಳುವುದುಂಟು, ಅಧಿಕಾರದಲ್ಲಿರುವ ಪಕ್ಷದವರಿಗೆ ಮಾತ್ರ ಅನುಕೂಲವಾಗುತ್ತಿದೆ. ರೈತರು ಅರ್ಜಿ ಹಾಕಿದರೆ ಅವರು ಅಧಿಕಾರದಲ್ಲಿರುವ ಪಕ್ಷದವರಿಗೆ ಸೇರಿದವರಾಗಿದ್ದರೆ ಅವರಿಗೆ ಕೊಡದಂತೆ ಮಾಡುವುದುಂಟು. ಇದರಿಂದ ಬೇಕಾದವರಿಗೆ ಸಹಾಯ ದೊರೆಯುತ್ತಿಲ್ಲ. ಇಂಥ ಅನ್ಯಾಯ ನಡೆಯುವುದರಿಂದ ಕ್ಷಾಮ ನಿವಾರಣೆಯಾಗುವುದಕ್ಕೆ ಬದಲಾಗಿ ಕ್ಷಾಮ ಹೆಚ್ಚಾಗುವುದಕ್ಕೆ ಅವಕಾಶವಾಗಿದೆ.

ಇನ್ನು ಬಿದರೆಯಲ್ಲಿ 'ದಮನ್' ಎನ್ನುವ ಒಂದು ವಾರಪತ್ರಿಕೆಯಿದೆ. ಅದರ ಸಂಪಾದಕರು ಆವರ ಪತ್ರಿಕೆಯಲ್ಲಿ ಅಭಾವ ಕಾಮಗಾರಿಗಳ ಸಂಬಂಧದಲ್ಲಿ ಲಂಚದಹಾವಳಿ ಹೆಚ್ಚಾಗುತ್ತಿರುವುದನ್ನು, ಪೋಲೀಸು ನವರು ನಡೆಸುತ್ತಿರುವ ಅತ್ಯಾಚಾರ ಮತ್ತು ದುರ್ನಡತೆಗಳು ಮತ್ತು ಜೂಜುಕಟ್ಟೆ ನಡೆಸುವವರಿಗೆ ಅವರು ಯಾವ ರೀತಿ ರಕ್ಷಣೆ ಕೊಡುತ್ತಿದ್ದಾರೆ ಎನ್ನುವುದರ ವಿಚಾರದಲ್ಲಿ ಎಡಿಟೊರಿಯಲ್ ಮತ್ತು ಆರ್ಟಿಕಲ್ಸ್ ಬರೆದು ಜನರ ಗಮನಕ್ಕೆ ತಂದರು. ಸಾರ್ವಜನಿಕರು ಆ ಸಂಪಾದಕರು ಧೈರ್ಯದಿಂದ ಬರೆಯುತಿರುವುದನ್ನು ಮೆಚ್ಚಿದ್ದಾರೆ. ಆದರೆ ಆಲ್ಲಿಯ ಕೆಲವು ರಾಜಕೀಯ ಮುಖಂಡರು ಮತ್ತು ಪೋಲೀಸು ಇಲಾಖೆಯ ಅಧಿಕಾರಿಗಳು ಈ ಸಂಪಾದಕರ ಮೇಲೆ ಸೇಡು ತೀರಿಸಿಕೊಳ್ಳಲು ತೊಡಗಿದ್ದಾರೆ. ಅಲ್ಲಿಯ ಸಬ್‌ಇನ್‌ಸ್ಪೆಕ್ಟರು ನಾಲ್ಕು ಜನ ಕಾನ್‌ಸ್ಟೇಬಲ್ಲುಗಳನ್ನು ಜೊತೆಗೆ ಕರೆದುಕೊಂಡು ರಾತ್ರಿ ಹತ್ತು ಗಂಟೆಯಲ್ಲಿ ಆ ವಾರ ಪತ್ರಿಕೆಯ ಕಛೇರಿಗೆ ಹೋಗಿ, ಬಾಗಿಲು ಮುರಿದು ಸಂಪಾದಕರ ಮೇಲೆ ಒಂದೂ ವರೆಗಂಟೆಯತನಕ ಹಲ್ಲೆ ನಡೆಸಿರುವುದಲ್ಲದೆ ಮನಸ್ಸಿಗೆ ಬಂದಹಾಗೆ ಬೈದರು. ಈ ವಿಚಾರವನ್ನು ಉನ್ನತ

(ಶ್ರೀ ವಿ. ಎನ್. ಪಾಟೀಲ್)

ಅಧಿಕಾರಿಗಳ ಗಮನಕ್ಕೆ ತಂದರೂ ಇಲ್ಲಿಯವರೆಗೂ ಏನೂ ಕ್ರಮ ಆದರ ಬಗ್ಗೆ ತೆಗೆದುಕೊಳ್ಳಲಿಲ್ಲ ಮತ್ತು ಆ ಪೋಲೀಸ್ ಅಧಿಕಾರಿಗಳು ಮತ್ತು ಜೂಜು ಕಟ್ಟೆ ನಡೆಸುವವರು ಅವರಿಗೆ ಬೆದರಿಕೆ ಹಾಕುತ್ತಿದ್ದಾರೆ. ಈ ಹಿಂದೆಯೇ ಇಂಥ ಬೆದರಿಕೆ ಕೇಸುಗಳನ್ನು ಈ ಮನೆಯ ಗಮನಕ್ಕೆ ತಂದಿದ್ದೆ. ಬೊರಿ ಗ್ರಾಮದ ಸರಪಂಚ್ ಅವರು ಡೆಪ್ಯುಟಿ ಹೋಂ ಮಿನಿಸ್ಟರ್‌ಗೆ ರಕ್ಷಣೆ ಕೊಡಿ ಎಂದು ಕೇಳಿದ್ದರು, ಆದರೂ ರಕ್ಷಣೆ ಸಮಯಕ್ಕೆ ಸರಿಯಾಗಿ ಸಿಕ್ಕದೆ ಇದ್ದಾಗ ಆ ವ್ಯಕ್ತಿ ಒಂದು ತಿಂಗಳೊಳಗೆ ಕೊಲೆ ಮಾಡಲ್ಪಟ್ಟು ಆತನ ಶವವನ್ನು ಕೂಡ ಸುಟ್ಟುಹಾಕಿದ್ದಾರೆ. ಪ್ರಾಣ ಹೋದಮೇಲೆ ನೀವು ಯಾವ ರಕ್ಷಣೆ ಕೊಡಬಲ್ಲಿರಿ ? ಅವನ ಪ್ರಾಣಕ್ಕಾವರೂ ರಕ್ಷಣೆ ಕೊಡುವುದು ನಿಮ್ಮ ಪರಮ ಕರ್ತವ್ಯ.

ಮುಖ್ಯವಾಗಿ ರೈತರಿಗೆಲ್ಲಿ ತೊಂದರೆಯಿದೆ ಅಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಕ್ಷಾಮ ಕಾಲವೆಂದು ತೆಗೆಸುವ ಬಾವಿಗಳಲ್ಲಿ ನೀರೆ ಇರುವುದಿಲ್ಲ.

ಕ್ಷಾಮದ ಹೆಸರಿನಲ್ಲಿ ಕಟ್ಟಿಸಿದಂತಹ ಬಾವಿಗಳನ್ನು ಇವತ್ತು ನಾವು ನೋಡುತ್ತಾ ಇದ್ದೇವೆ. ಅರ್ಧಂಬರ್ಧ ಆಗಿವೆ ರೈತರಿಗೆ ಬ್ಲಾಸ್ಟಿಂಗ್ ಮೆಷೀನ್‌ಗಳನ್ನು ಕೊಟ್ಟಿದ್ದೀರಿ, ಎಲ್ಲಿ ಅವುಗಳನ್ನು ತೆಗೆದುಕೊಂಡಿದ್ದರೋ ಅವರು ತಮ್ಮ ಕೆಲಸ ಪೂರ್ತಿಮಾಡಿಕೊಳ್ಳುವ ತನಕ ಅವನ್ನು ಉಪಯೋಗಿಸಿಕೊಳ್ಳುವುದಕ್ಕೆ ಕೊಡದೆ ಬೇರೆ ಕಡೆಗೆ ತೆಗೆದುಕೊಂಡು ಹೋಗಿ ೩೦-೪೦ ಅಡಿ ಹೊಡೆದು ಹಾಗೆಯೇ ನಿಂತಂತಹ ಪರಿಸ್ಥಿತಿ ಇದೆ. ಇದು ನಮ್ಮ ಊರು, ನಮಗೆ ಮಾನ ಬರಬೇಕು ಅಂತ ಹೇಳಿ ಕೆಲಸ ಮಾಡುವಂತಹ ಮನಸ್ಸು, ಲೀಡರ್‌ಗಳಲ್ಲಿ, ಅಧಿಕಾರಿಗಳಲ್ಲಿ ಇಲ್ಲದೇ ತೊಂದರೆಯಾಗುತ್ತಾ ಇದೆ. ಅಧಿಕಾರಿಗಳಲ್ಲಿ ಕೆಲಸ ಮಾಡುವುದಕ್ಕೆ ಮನಸ್ಸು ಇಲ್ಲದೆ ಲಂಚಗುಳಿತನ ಹೆಚ್ಚಾಗಿ ಹಣ ದುರುಪಯೋಗವಾಗುತ್ತಾ ಇದೆ. ಇದರಿಂದ ಕ್ಷಾಮ ಪರಿಸ್ಥಿತಿ ದಿನೇ ದಿನೇ ಹೆಚ್ಚಾಗುತ್ತಾ ಇದೆ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಕ್ಷಾಮದ ಹೆಸರಿನಲ್ಲಿ ೪-೫ ರಸ್ತೆಗಳಾಗಿವೆ. ಜೀಪು, ಮೋಟರ್ ಸೈಕಲ್ ಆಗಲಿ ಯಾವುದೂ ಕೂಡ ಅಲ್ಲಿ ಹೋಗುವ ಸ್ಥಿತಿ ಇಲ್ಲ, ಇಂತಹ ರಸ್ತೆಗಳನ್ನು ಏಕೆ ಮಾಡಬೇಕು ? ಈ ರಸ್ತೆಗಳು ಈ ಜನ್ಮದಲ್ಲಿ ಪೂರ್ತಿಯಾಗುವ ಹಾಗೆ ಇಲ್ಲ ಈ ರೀತಿ ಅರ್ಧಂಬರ್ಧ ಮನಸ್ಸಿನಿಂದ ಮಾಡುವುದಕ್ಕೆ ಬದಲಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ೧೦-೧೫ ಲಿಫ್ಟ್ ಇರಿಗೇಷನ್ ಸ್ಕೀಂಗಳನ್ನು ತೆಗೆದುಕೊಂಡು ೧೦-೧೫ ಬಾವಿಗಳನ್ನು ತೆಗೆಸಲು ಹಣ ಕೊಡ್ರಿ, ಪ್ರತಿಯೊಂದು ಹಳ್ಳಿಯಲ್ಲೂ ಪಿಕ್‌ಅಪ್ಸ್ ಕಟ್ಟಿಸಿ ಕೊಡ್ರಿ ಈ ರೀತಿ ಡೆವಲಪ್‌ಮೆಂಟ್ ಆಗಬೇಕು. ಬೇಕಾದಷ್ಟು ಹಣ ಖರ್ಚು ಮಾಡುತ್ತಾ ಇದ್ದೀರಿ, ಪ್ರತಿಯೊಂದು ಗ್ರಾಮದಲ್ಲೂ ಈ ರಿಲೀಫ್ ವರ್ಕ್ಸ್‌ಗೆ ಹಣ ಡಿಸ್ಟ್ರಿಬ್ಯೂಟ್ ಮಾಡುವ ಸಲುವಾಗಿ ಆ ಗ್ರಾಮದ ಪಂಚಾಯ್ತಿ ಚೇರ್ಮನರು ಯಾರಿದ್ದಾರೆ ಅವರ ಮೂಲಕ ದುಡ್ಡು ವಿತರಣೆಯಾದರೆ ಲಂಚಗುಳಿತನ ಕಡಿಮೆಯಾಗುತ್ತದೆ. ಆದ್ದರಿಂದ ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಕಮಿಟಿ ಮಾಡಿರಿ. ಇದರಿಂದ ಒಬ್ಬರಮೇಲೊಬ್ಬರು ದೂರು ಹೇಳುವುದಕ್ಕೆ ಅವಕಾಶವಾಗುವುದಿಲ್ಲ, ಈ ರೀತಿ ಶಾಶ್ವತವಾದ ಕ್ಷಾಮ ಪರಿಹಾರ ಕಾರ್ಯಗಳನ್ನು ಮಾಡಬೇಕೆಂದು ಹೇಳಿ ಹೆಚ್ಚು ಕಾಲಾವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಕೆ. ಬೊಮ್ಮೆಗೌಡ ;— (ಕೃಷ್ಣರಾಜಪೇಟೆ) : —

ಅಧ್ಯಕ್ಷರೆ, ಈ ಕ್ಷಾಮ ಅಂತ ಅನ್ನುವುದು ಈ ದೇಶದಲ್ಲಿ ಪದೇ ಪದೇ ಬರುತ್ತಾ ಇದೆ. ಇದರ ಇತಿಹಾಸವನ್ನು ನೋಡಿದರೆ ನಮ್ಮ ದೇಶದಲ್ಲಿ ಇದು ಬಹಳ ವರ್ಷದಿಂದಲೂ ಇದೆ. ಕ್ಷಾಮ ಅನ್ನುವುದು ಆಗಾಗ್ಗೆ ಬರುತ್ತಲೇ ಇದೆ. ಇದರ ನಿವಾರಣೆಗೆ ಕಟ್ಟುನಿಟ್ಟಾಗಿ ಯಾವುದಾದರೂ ಒಂದು ಯೋಜನೆಯನ್ನು ತೆಗೆದುಕೊಂಡು ಇದು ಬರದಹಾಗೆ ತಡೆಗಟ್ಟುವುದಕ್ಕೆ ಏನಾದರೂ ಮಾಡಿದ್ದಾರೆಯೇ ಎಂದರೆ ಇದುವರೆಗೂ ಏನೂ ಮಾಡಿಯೇ ಇಲ್ಲ. ಅಳುವ ಮಕ್ಕಳಿಗೆ ಕಣ್ಣು ಒರೆಸುವ ಹಾಗೆ ಆಗುತ್ತಾ ಇದೆ ಕ್ಷಾಮ ನಿವಾರಣೆಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಾ ಇದೇವೆ ಎಂದು ಹೇಳುತ್ತಾ ಇದ್ದೀರಿ, ಖರ್ಚು ಮಾಡುತ್ತಲೂ ಇದ್ದೀರಿ, ನಿಜವಾಗಿಯೂ ಇದು ಜನಕ್ಕೆ ಸೇರುತ್ತಾ ಇದೆಯೇ ಅಂತ ಅನ್ನುವುದು ನಮ್ಮ ಪ್ರಶ್ನೆ. ನಮ್ಮ ಜಿಲ್ಲೆಯಲ್ಲಿ ಅಧಿಕವಾದ ಕ್ಷಾಮ ಪೀಡಿತ ಪ್ರದೇಶ ಎಂದರೆ ನಾಗಮಂಗಲ. ಅಲ್ಲಿ ಕ್ಷಾಮ-ನಿವಾರಣೆಯ ಕೆಲಸ ನಡೆಯಿತು. ಅದು ಒಂದು ವಿಚಿತ್ರವಾಗಿ ನಡೆದಿದೆ. ೧೨ಲಕ್ಷ ರೂಪಾಯಿ ಕೊಟ್ಟಿರಿ ಎಂದು ಕೇಳಿದ್ದೇನೆ ಅದರಲ್ಲಿ ೧೨ ಲಕ್ಷ ರೂಪಾಯಿಗಳವರೆಗೂ ಕೆಲಸವಾಗಿದೆ. ಜನಗಳಿಗೆ ಅದು ಹೇಗೆ ತಲುಪಿದೆ ಎಂದರೆ ನಾನು ಕೇಳಿರುವುದು ಆಲ್ಲಿರುವ ಬಿ ಡಿ ಓ ಅನ್ನುವವನು ಆ ತಾಲ್ಲೂಕಿನಲ್ಲಿ ಮೂರೂವರೆ ಲಕ್ಷ ರೂಪಾಯಿ ಸಂಪಾದನೆ ಮಾಡಿ ತನ್ನ ಹೆಂಡತಿ ಹೆಸರಿನಲ್ಲಿ ಬ್ಯಾಂಕಿನಲ್ಲಿ ಇಟ್ಟಿದ್ದ, ಅದು ತನಿಖೆ ಆಗಿ ಆತನನ್ನು ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದರು. ಈಗ ರೀಇನ್‌ಸ್ಟೇಟ್ ಮಾಡಿದ್ದಾರೆ ಎಂದು ವರ್ತಮಾನ ಕೇಳುತ್ತಾ ಇದ್ದೇನೆ. ಈ ತರಹ ಎಲ್ಲಾ ಕಡೆಯಲ್ಲೂ ನಡೆದಿದೆ. ಯಾರಿಗೆ ಈ ಪರಿಹಾರ ತಲುಪಬೇಕೋ,

ಎಲ್ಲಿ ಜನಜೀವನ ಸುಧಾರಿಸಬೇಕೋ ಅಲ್ಲಿ ಆ ಕೆಲಸವಾಗುತ್ತಿಲ್ಲ, ಇದನ್ನು ಇದುವರೆಗೂ ಸರ್ಕಾರದವರು ಅರಿತುಕೊಳ್ಳದೆ ಕ್ಷಾಮ ನಿವಾರಣೆಯ ಕೆಲಸವನ್ನು ಮಾಡುತ್ತಾ ಇದ್ದೇವೆ ಎಂದು ಸರ್ಕಾರದ ಬೊಕ್ಕಸದಿಂದ ಹಣವನ್ನು ಸುಮ್ಮನೆ ಖರ್ಚು ಮಾಡುತ್ತಾ ಹೋಗುತ್ತಿದ್ದಾರೆ. ಇದರಿಂದ ಈ ಸಮಸ್ಯೆಯನ್ನು ಬಗೆಹರಿಸಿದಂತಾಗುವುದಿಲ್ಲ, ಶಾಶ್ವತವಾಗಿ ಕ್ಷಾಮಡಾಮರಗಳು ನಮ್ಮ ದೇಶದಲ್ಲಿ ತಲೆ ಎತ್ತದಂತಹ ಸ್ಕೀಂಗಳನ್ನು ಹಾಕಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಈಗಲಾದರೂ ಸರ್ಕಾರದವರು ಮನಸ್ಸು ಮಾಡಬೇಕೆಂದು ಹೇಳುತ್ತಾ ಇದ್ದೇನೆ. ನನ್ನ ತಾಲ್ಲೂಕಿನ ವಿಷಯ ಹೇಳುವುದಾದರೆ ೩೦೦ ಗ್ರಾಮಗಳ ಪೈಕಿ ೨೦೦ ಗ್ರಾಮದಲ್ಲಿ ಕುಡಿಯುವ ನೀರೇ ಇಲ್ಲ ದನಕರುಗಳಿಗೆ ಕುಡಿಯುವ ನೀರು ಇಲ್ಲ, ೫-೬ ಮೈಲಿಯಿಂದ ನೀರನ್ನು ಹೊತ್ತಿದ್ದಾರೆ. ನೀವೇನೋ ಬಾವಿ ತೆಗೆಯುವುದಕ್ಕೆ ದುಡ್ಡು ಕೊಟ್ಟಿದ್ದೀರಿ, ಆದರೆ ಇದುವರೆಗೂ ಕೂಡ ಒಂದು ಬಾವಿಯ ಕೆಲಸ ಕೂಡ ಕಂಪ್ಲೀಟ್ ಆಗಿಲ್ಲ ಈ ರೀತಿ ಕ್ಷಾಮ ನಿವಾರಣೆಯ ಕೆಲಸ ನಡೆದಿದೆ. ರಸ್ತೆಗಳ ಕೆಲಸ ತೆಗೆದುಕೊಳ್ಳುತ್ತೀರಿ. ಯಾವ ರಸ್ತೆ ಕೆಲಸ ಕೂಡ ಪೂರ್ತಿಯಾಗುವುದಿಲ್ಲ. ಈ ತರಹ ಒಂದು ಮಾರ್ಗವನ್ನು ಅನುಸರಿಸಿ ಕನ್ನಡಿಯೊಳಗಿನ ಗಂಟಿನ ಹಾಗೆ ಮಾಡುವ ಕೆಲಸ ನಮಗೆ ಬೇಕಾಗಿಲ್ಲ. ಪ್ರಜಾ-ಪ್ರಭುತ್ವದಲ್ಲಿ ಹೀಗೆ ಮಾಡಿದರೆ ನಿಮ್ಮ ಮುಖಂಡತನ ಯಾವ ರೀತಿ ಆಗುತ್ತದೆ ಎಂಬುದನ್ನು ತಾವು ಅರಿತುಕೊಳ್ಳಬೇಕು. ನಾವು ಇಲ್ಲಿ ಬಂದು ಒಬ್ಬರಿಗೊಬ್ಬರು ದೂರುವುದು ನಮ್ಮ ಕೆಲಸವಲ್ಲ. ನಮ್ಮ ಜವಾಬ್ದಾರಿಯನ್ನು ಅರಿತು ಕೊಂಡು ದೇಶದ ಅಭಿವೃದ್ಧಿ ಕೆಲಸಕಾರ್ಯಗಳನ್ನು ಎಷ್ಟು ಮಟ್ಟಿಗೆ ಸಾಧಿಸುತ್ತಾ ಇದ್ದೇವೆ ಎಂಬುದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ನನ್ನ ತಾಲ್ಲೂಕಿನಲ್ಲಿ ಎರಡು ನದಿಗಳು ಹರಿಯುತ್ತವೆ. ಒಂದು ಹೇಮಾವತಿ, ಇನ್ನೊಂದು ಕಾವೇರಿ. ಈ ಎರಡು ನದಿಗಳಲ್ಲೂ ಲಿಫ್ಟ್ ಇರಿಗೇಷನ್ ಪದ್ಧತಿಯನ್ನು ಅನುಸರಿಸಿ ಕೆಲಸ ಮಾಡಿದ್ದೇ ಆದರೆ ಆ ಏರಿಯಾದಲ್ಲಿ ಬೇಕಾದಷ್ಟು ವ್ಯವಸಾಯ ಮಾಡಬಹುದು. ಕಾಗದ ಪತ್ರಗಳು ಓಡಾಡುತ್ತಾ ಇವೆ, ಆದರೆ ಯಾವುದನ್ನೂ ಕಾರ್ಯಗತ ಮಾಡುವುದಕ್ಕೆ ಆಗಿಲ್ಲ. ಕೋಆಪರೇಟಿವ್ ಬೇಸಿಸ್ ಮೇಲೆ ಮಾಡಿ ಎಂದು ಹೇಳುತ್ತಾರೆ. ಒಂದು ಕಾಸು ಗತಿ ಇಲ್ಲದೇ ಇರತಕ್ಕ ಮನುಷ್ಯ ಕೋಆಪರೇಟೀವ್ ಬೇಸಿಸ್‌ಮೇಲೆ ಮಾಡಬೇಕೆಂದರೆ ಹಣ ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಇದೇ ರೀತಿ ಅನೇಕ ಹೊಸ ಸ್ಕೀಂಗಳನ್ನು ತರುತಾ ಇದ್ದೀರಿ, ಈ ಸ್ಕೀಂಗಳಿಂದ ಏನು ಪ್ರಯೋಜನವಾಗುತ್ತದೆ ? ನಮ್ಮ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ನದಿ ನೀರಿನಿಂದ ಸುಮಾರು ಎರಡು ಲಕ್ಷ ಎಕರೆ ನೀರಾವರಿಯಾಗುತ್ತದೆ. ಇನ್ನು ಉಳಿದಿರತಕ್ಕ ೮ ಲಕ್ಷ ಎಕರೆ ಇರತಕ್ಕವರ ಗತಿ ಏನು ? ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ತಾವು ಸ್ಕೀಂಗಳನ್ನು ತರುವಾಗ ವಿಶಾಲವಾದ ಮನೋಭಾವದಿಂದ ಮಾಡಬೇಕು, ಹೆಮ್ಮೆಯಿಂದ ಇಂತಹ ಒಂದು ಪ್ರಯೋಜನವಾಗತಕ್ಕ ಸ್ಕೀಂ ಮಾಡಿದ್ದೇವೆ ಎಂದು ಹೇಳಿಕೊಳ್ಳತಕ್ಕ ಕೆಲಸ ಇವತ್ತು ಆಗಬೇಕು, ಆದು ಆಗುತ್ತಿಲ್ಲ.

Chairman

(Smt. Nagarathnamma Hiremath in the Chair,)

ಇದುವರೆಗೂ ಕ್ಷಾಮ ನಿವಾರಣೆಗಾಗಿ ದುಡ್ಡು ಕೊಟ್ಟಿದ್ದರು ನನ್ನ ತಾಲ್ಲೂಕಿಗೆ ೬೫ ಸಾವಿರ ರೂಪಾಯಿನಲ್ಲಿ ೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸಗಳನ್ನು ಮಾಡಿಸಿದ್ದೇವೆ. ಇನ್ನೂ ಕೆಲವು ಕೆಲಸಗಳಾಗದೆ ಹಾಗೆಯೇ ಉಳಿದಿವೆ. ದುಡ್ಡನ್ನು ಆಷ್ಟು ಸುಲಭವಾಗಿ ಅಧಿಕಾರಿಗಳು ತಿನ್ನುವುದಕ್ಕೆ ಬಿಟ್ಟುಕೊಡುತ್ತಾ ಇಲ್ಲ ಗ್ರಾಮ ಮುಖಂಡರ ಮೂಲಕ ಕೆಲಸಗಳನ್ನು ನಡೆಸುತ್ತಿದ್ದೇವೆ. ದುಡ್ಡು ಕೊಡುವಾಗ ಕೆಲಸ ಎಷ್ಟು ಮಟ್ಟಿಗೆ ಆಗಿದೆ ಎಂಬುದನ್ನು ಇನ್‌ಸ್ಪೆಕ್ಷನ್ ಮಾಡಬೇಕೆಂದು ಮಾಡಿಕೊಂಡಿರುವುದರಿಂದ ಅಲ್ಲಿ ಮೂರು ಕಾಸಿನ ಕೆಲಸವನೂ ಅಧಿಕಾರಿಗಳಿಗೆ ಮಾಡಿಸುವುದಕ್ಕೆ ಆಗಿಲ್ಲ. ಅವರಿಗೆ ತಿನ್ನುವುದಕ್ಕೆ ಮತ್ತು ಖರ್ಚಿದ ಹಾಗೆ ಖರ್ಚುಮಾಡುವುದಕ್ಕೆ ಅವಕಾಶ ಇಲ್ಲ. ಯಾಕೆ ದುಡ್ಡನ್ನು ಖರ್ಚು ಮಾಡಿಲ್ಲ ಎಂದು ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಯಾವಾಗಲಾದರೂ ಸರಕಾರದವರು ಪ್ರಯತ್ನ ಪಟ್ಟಿದ್ದಾರೆಯೇ? ಈ ರೀತಿ ಇಷ್ಟು ಹಣ ಖರ್ಚು ಮಾಡದೆ ಹೋದರೆ ನಿಮ್ಮ ಸಂಬಳವನ್ನು ಹಿಡಿಯುತ್ತಾರೆ ಅಥವಾ ಇನ್ನಾವ ರೀತಿಯಿಂದಾದರೂ ಅವರಿಗೆ ಶಿಕ್ಷೆಯನ್ನು ಕೊಡುತ್ತಾರೆ ಎನ್ನುವ ಭೀತಿ ಅಧಿಕಾರಿಗಳಿಗೆ ಇಲ್ಲ. ಅವರಿಗೆ ತಿನ್ನುವುದಕ್ಕೆ ಸಂಪೂರ್ಣವಾಗಿ ಅವಕಾಶ ಮಾಡಿಕೊಟ್ಟರೆ ಎಷ್ಟು ಬೇಕಾದರೂ ದುಡ್ಡು ಖರ್ಚು ಮಾಡುತ್ತಾರೆ. ಸರಕಾರದವರಿಗೆ ನಾಗಮಂಗಲ ಮತ್ತು ಕೃಷ್ಣರಾಜ ಪೇಟೆಯಲ್ಲಿರುವ ಅಧಿಕಾರಿಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಆಗಿಲ್ಲ. ಎನ್. ಇ. ಎಸ್. ವಿಲೇಜ್ ವರ್ಕರ್ಸ್ ಇವರ ಆವರನ್ನು ಪ್ರೊಗ್ರೆಸ್ ರಿಪೋರ್ಟ್ ಕೊಡಿ ಎಂದು ಕೇಳಿದರೆ ಹಿಂದಿನದನ್ನು ಕಾಪಿ ಮಾಡಿ ಪುನಃ ಪುನಃ ಹಳೆಯದನ್ನೇ ರಿಪೋರ್ಟ್ ಕಳುಹಿಸುತ್ತಾರೆ. ಈ ಮೊತ್ತು ಎನ್. ಇ. ಎಸ್. ಬಂದಮೇಲೆ ವಿಲೇಜ್ ಲೆವಲ್ ವರ್ಕರ್ಸ್ ಅವರಿಂದ ಏನೇನು ರಿಪೋರ್ಟನ್ನು ತರಿಸಿಕೊಂಡಿದ್ದಾರೆ ? ಪಂಚಾಯಿತಿಗಳ ಮೂಲಕ ದುಡ್ಡು ಕೊಟ್ಟು ಕೆಲಸ ಮಾಡಿಸಿದರೆ ಸಾಮಾನ್ಯವಾಗಿ ಕೆಲಸಗಳಾಗುತ್ತವೆ. ಒಬ್ಬನಿಗೇ ಎಲ್ಲಾ ದುಡ್ಡು ಸೇರಬೇಕು

ಶ್ರೀಮತಿ ಕೆ. ಲೀಲಾವತಿ ರೈ)

ಇದುವರೆಗೂ ಒಂದೂ ಇಲ್ಲ. ಇತರ ಕಡೆ ಲಿಫ್ಟ್ ಇರ್ರಿಗೇಷನ್ ಬೇಕಾದಷ್ಟು ಮಾಡಿಕೊಡಿದ್ದಾರೆ. ಕೊಆಪರೇಷನ್ ಇಲ್ಲದೆ ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ ಆದ್ದರಿಂದ ಈ ವರ್ಷ ಇದರ ಗೋಜಿಗೆ ಹೋಗುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಬಂಟವಾಳ ತಾಲ್ಲೂಕಿನಲ್ಲಿ ಎರಡು ಲಿಫ್ಟ್ ಇರ್ರಿಗೇಷನ್‌ಗಳು ಮಾತ್ರ ಮಂಜೂರಾಗಿವೆ ಅವು ಅಲ್ಲೇ ನಿಂತಿವೆ ಮಾನ್ಯ ಶ್ರೀ ಮಂಜೇಗೌಡರು ಹೇಳಿದನ್ನು ನಾನು ಪುಷ್ಟಿಕರಿಸಿ ಮುಂದೆ ಸರ್ಕಾರದವರು ಎಲ್ಲೆಲ್ಲ ಲಿಫ್ಟ್ ಇರ್ರಿಗೇಷನ್ ಸೌಕರ್ಯಗಳನ್ನು ಮಾಡಿಕೊಡಬೇಕೋ ಅಲ್ಲಲ್ಲೆ ಕೂಡಲೇ ಮಾಡಿಕೊಟ್ಟು ರೈತರಿಗೆ ನೀರಿನ ಸೌಕರ್ಯವನ್ನು ಒದಗಿಸಬೇಕು. ಈ ಒಂದು ಬೇಡಿಕೆಯನ್ನು ನಾನು ಸರ್ಕಾರದ ಮುಂದೆ ಇಡಲಿಕ್ಕೆ ಬಯಸುತ್ತೇನೆ. ನಮ್ಮಲ್ಲಿ ನೇತ್ರಾವತಿ ನದಿಯು ಹರಿಯುತ್ತಿರುವುದರಿಂದ ಆ ನದಿಯ ಬುಡದಲ್ಲಿ ಇರತಕ್ಕ ರೈತರು ಸಾವಿರಾರು ಎಕ್ರೆಗಳಷ್ಟು ಜಮೀನನ್ನು ಕೃಷಿ ಮಾಡುತ್ತಿದ್ದಾರೆ, ಇಲ್ಲಿ ಸರ್ಕಾರದ ವತಿಯಿಂದ ಫರ್ಟಿಲೈಜರ್ಸ್ ರೈತರಿಗೆ ಸಪ್ಲೈಯಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಉತ್ತಮವಾದ ಫರ್ಟಿಲೈಜರ್ ಫ್ಯಾಕ್ಟರಿ ಮಾಡಲಿಕ್ಕೆ ಅವಕಾಶವಿದೆ. ಈಗ ನೇತ್ರಾವತಿ ನೀರು ಮಂಗಳೂರಿನ ಸೂರತ್‌ಕಲ್ ಇಂಜನಿಯರಿಂಗ್ ಕಾಲೇಜಿಗೆ ಹೋಗುತ್ತದೆ. ಮಂಗಳೂರು ಹಾರ್ಬರ್‌ಗೆ ನೇತ್ರಾವತಿ ನದಿಯಿಂದಲೇ ನೀರು ಹೋಗುತ್ತದೆ. ಫರ್ಟಿಲೈಜ್ ಫ್ಯಾಕ್ಟರಿಗೂ ಅಲ್ಲಿಂದಲೇ ನೀರು ಹೋಗುತ್ತದೆ. ಇದಲ್ಲದೆ ಮಂಗಳೂರು ಸಿಟಿಗೂ ನೀರು ಅಲ್ಲಿಂದಲೇ ಸಪ್ಲೈ ಆಗಬೇಕಾಗಿದೆ ನೀರು ಆಳತೆಮಾಡುವ ಇಂಜನಿಯರ್ಸ್ ಹೇಳುತ್ತಾರೆ, ನೇತ್ರಾವತಿಯಿಂದ ನೀರು ಫರ್ಟಿಲೈಜ್ ಫ್ಯಾಕ್ಟರಿಗೆ, ಮಂಗಳೂರು ಹಾರ್ಬರ್‌ಗೆ ಮತ್ತು ಮಂಳೂರಿನ ಸೂರತ್‌ಕಲ್ ಕಾಲೇಜಿಗೆ ಹೋಗುವುದರಿಂದ ಮಂಗಳೂರು ಸಿಟಿಯಲ್ಲಿ ಇರುವವರಿಗೆ ಕುಡಿಯಲಿಕ್ಕೆ ನೀರು ಸಿಗುವುದೇ ಕಷ್ಟವಾಗಿದೆ ರೈತರಿಗೆ ನೀರು ಕೊಡುವುವಕ್ಕೆ ಈಗ ಸಾಧ್ಯವಾಗಿಲ್ಲ ಎಂದು ಆದ್ದರಿಂದ ಒಂದು ಸಾವಿರ ಪಂಪುಸೆಟ್ಟುಗಳನ್ನಾದರೂ ಅಲ್ಲಿಗೆ ಕೊಡಬೇಕು, ಕೇವಲ ೩ ಆಥವಾ ೪ ಪಂಪುಸೆಟ್ಟುಗಳನ್ನು ಕೊಟ್ಟರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಎಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅದನ್ನು ಕೂಡಲೇ ಬಗೆಹರಿಸಬೇಕು. ಆ ರೀತಿಯಾಗಿ ಪಂಪುಸೆಟ್ಟುಗಳನ್ನು ಹೆಚ್ಚಿಗೆ ಒದಗಿಸಿದರೆ ನಮ್ಮ ಹಳ್ಳಿಯ ರೈತರು ಬಹಳ ಉತ್ಪನ್ನದಿಂದ ಹೆಚ್ಚು ಹೆಚ್ಚಾಗಿ ಆಹಾರವನ್ನು ಬೆಳೆದು ಸರಬರಾಜು ಮಾಡುತ್ತಾರೆ. ಆದರೆ ಈಗ ನೇತ್ರಾವತಿಯಿಂದ ಎಲ್ಲಾ ಕಡೆಗಳಿಗೂ ನೀರನ್ನು ಕೊಡುತ್ತಾ ಇರುವುದರಿಂದ ಇನ್ನು ಮುಂದೆ ಅಲ್ಲಿಗೆ ಪಂಪುಸೆಟ್ಟುಗಳನ್ನು ಕೊಡುವುದನ್ನು ನಿಲ್ಲಿಸಬೇಕೆಂದು ಒಂದು ಆಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದಾರೆ.

ಅದನ್ನು ನಾನು ಪೊನ್ನೆ ಮಾನ್ಯ ಮಂತ್ರಿಯವರಿಗೆ ಕೊಟ್ಟಿದ್ದೇನೆ. ಒಬ್ಬ ತಾಲೂಕು ಬೋರ್ಡು ಸದಸ್ಯರು ಇದರ ಬಗ್ಗೆ ಒಂದು ಪ್ರಸ್ತಾವನ್ನು ತಾಲೂಕುಬೋರ್ಡು ಪೆಸ್ರಿಡೆಂಟರಿಗೆ ಬರೆದಿದ್ದಾರೆ ಅದನ್ನು ನಾನು ಇಲ್ಲಿ ಓದುತ್ತೇನೆ, ಅದು ಹೀಗಿದೆ:

"ಪ್ರಕೃತ ನೇತ್ರಾವತಿ ನದಿಯಲ್ಲಿ ೧೯೦ ಪಂಪುಸೆಟ್ಟುಗಳ ಮೂಲಕ ಸುಮಾರು ೪೮೦೦ ಎಕರೆ ಭೂಮಿಯಲ್ಲಿ ಭತ್ತದ ಕೃಷಿ ಮತ್ತು ಹಲವಾರು ಭೂಮಿಯಲ್ಲಿ ಅಡಿಕೆ ತೋಟ, ತೆಂಗಿನ ತೋಟಗಳನ್ನು ಮಾಡಿರುವುದು, ಮತ್ತು ಅದರಿಂದ ಫಲ ಬರುವುದಕ್ಕೂ ಪ್ರಾರಂಭವಾಗಿರುವ ಸಂತಿ ಹೆಚ್ಚಿನ ಜನರಿಗೆ ತಿಳಿದಿರುವ ಸಂಗತಿಯಾಗಿದೆ.

ಸದ್ರಿ ತೋಟಗಾರಿಕೆ ಮತ್ತು ಗದ್ದೆಗಳನ್ನು ಮಾಡುವರೇ ರೈತರಿಗೆ ಸರಕಾರದಿಂದಲೂ ಮತ್ತು ಭೂ ಅಭಿವೃದ್ಧಿ ಬ್ಯಾಂಕಿನಿಂದಲೂ ಸಹಕಾರ ಸಂಘದಿಂದಲೂ ಲಕ್ಷಗಟ್ಟಲೆ ರೂಪಾಯಿ ಸಾಲ ಕೊಟ್ಟಿರುತ್ತಾರೆ.

ಸದ್ರಿ ಕೃಷಿಗಳು ನಾಶ ಹೊಂದಿದರೆ ರೈತರು ಸರ್ಕಾರದ ಲೋನುಗಳನ್ನು ಮರುಪಾವತಿ ಮಾಡುವ ವಿಧಾನ ಹೇಗೆ ಮತ್ತು ಇಡೀ ಕುಟುಂಬದ ಜೀವನಕ್ಕೂ ಮತ್ತು ಇಡೀದೇಶಕ್ಕೂ ಒಂದು ದೊಡ್ಡ ನಷ್ಟ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಆದುರಿಂದ ಈ ವಿಚಾರವನ್ನು ನಮ್ಮ ತಾಲೂಕು ಬೋರ್ಡಿನಲ್ಲಿ ಒಂದು ಸ್ಪೆಶಲ್ ಮೀಟಿಂಗನ್ನು ಕರೆದು ಆದರಲ್ಲಿ ಚರ್ಚಿಸಿ ಒಂದು ಅಭಿಪ್ರಾಯಕ್ಕೆ ಬಂದು ಅದನ್ನು ಸರ್ಕಾರಕ್ಕೆ ತಿಳಿಸಬೇಕೆಂದು ನಾನು ಈ ಬೋರ್ಡನ್ನು ವಿನಂತಿಸಿಕೊಳ್ಳುತ್ತೇನೆ."

ಇತೀ ತಮ್ಮ ವಿಶ್ವಾಸಿ.

ಹೀಗೆ ಒಂದು ಪತ್ರವನ್ನು ಬರೆದಿದ್ದಾರೆ. ನಾವು ಕಳೆದ ಸಾರಿ ನಮ್ಮ ಆಹಾರ ಸಚಿವರು ವಂಗಳೂರಿಗೆ ಬಂದಾಗ ಅಲ್ಲಿಗೆ ಇಂಜಿನಿಯರ್ಸನ್ನು ಕರೆದು ರೈತರ ಪರಿಸ್ಥಿತಿ ಹೀಗೆ ಅದನ್ನು ಇದೆ ಪರಿಹರಿಸಬೇಕೆಂದು ಕೇಳಿಕೊಂಡಿದ್ದೇವೆ ಅದಕ್ಕೆ ಅವರು ಹೇಳಿದ್ದೇನೆಂದರೆ, ಆರ್ಕುಳದಲ್ಲಿ ವಂಗಳೂರಿಗೆ ನೀರು ಒದಗಿಸುವ ಒಂದು ಕೆರೆ ಇದೆ. ಅಲ್ಲಿಂದ ಮೇಲಿನ ಪಂಪ್‌ಸೆಟ್ಟುಗಳಿಗೆ ತೊಂದರೆ ಇದೆ. ಆವರ ಅಂದಾಜಿನ ೨೦೦ ಕ್ಯೂಸೆಕ್ಸ್ ನೀರು, ಎನಿದೆ, ಅದು ಪಣಂಚೂರು ಹಾರ್ಬರಿಗೊಬೇಕಾಗುತ್ತದೆ, ಎಂದು ಹೇಳ್ತಾರೆ.ಅಲ್ಲಿ ರೈತರಿಗೆ ರೆವನ್ಯೂ ಇಲಾಖೆಯಿಂದ ಪಂಪ್‌ಸೆಟ್ಟು ಸ್ಥಾಪನೆಮಾಡುವುದಕ್ಕೆ ಕೊಟ್ಟಿದ್ದಾರೆ, ಮತ್ತು ಪಿಡಬ್ಲ್ಯೂಡಿ ಇಲಾಖೆಯಿಂದಲೂ ಕೊಟ್ಟಿದ್ದಾರೆ. ಈಗ ರೈತರ ಪಂಪ್‌ಸೆಟ್ಟುಗಳನ್ನು ರದ್ದು ಮಾಡಿದರೆ, ಆರೈತರ ಗತಿ ಏನು? ಆಹಾರ ಮಂತ್ರಿಯವರು ಅಲ್ಲಿಗೆ ಬಂದಾಗ, ಈಗ ಇದ್ದದನ್ನು ಸದ್ಯಕ್ಕೆ ಹಾಗೆ ಇಡುತ್ತೇವೆ, ಮತ್ತು ಸರ್ಕಾರದ ಆಜ್ಞೆ ಹಾಗೆ ಇದೆ ಎಂದು ಹೇಳಿದರು. ಈಗ ಫರ್ಟಿಲೈಸರ್ ಫ್ಯಾಕ್ಟರಿಗೆ ನೀರು ಬೇಕು ಹಾರ್ಬರಿಗೆ ನೀರು ಬೇಕು, ಮತ್ತು ವಂಗಳೂರಿಗೂ ನೀರು ಬೇಕು. ಆದರೆ, ರೈತರಿಗೆ ತೊಂದರೆ ಬರದ ಹಾಗೆ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಳ್ಳುವುದು ಬಹಳ ಮುಖ್ಯ. ಆಲ್ಲದೆ ಆರ್ಕುಳದಿಂದ ಮೇಲೆ ಸಾಲ್ಟ್ ವಾಟರ್ ಬರುತ್ತಿದೆ ಅದನ್ನು ಕೂಡ ತಪ್ಪಿಸುವುದಕ್ಕೆ ಸರ್ಕಾರ ಒಂದು ಯೋಜನೆಯನ್ನು ಹಾಕಬೇಕು. ಇದನ್ನು ಬಹಳ ವರ್ಷಗಳಿಂದ ಆಲೋಚನೆ ಮಾಡುತ್ತಾ ಇದ್ದಾರೆ ಆದರೆ ಇಷ್ಟರವರೆಗೆ. ಕಾರ್ಯಗತ ಮಾಡಿಲ್ಲ. ಇದನ್ನು ಇನ್ನೂ ಮುಂದಕ್ಕೆ ಹಾಕಿದೆರೆ. ಉಪು ನೀರು ಪಂಪಿಂಗ್‌ಕ್ಕೆ ಬಂದರೆ ಬೆಳೆಗೆ ಬಹಳ ಹಾನಿಯಾಗುತ್ತದೆ ಮತ್ತು ಮೂರು ತಿಂಗಳ ಮಟ್ಟಿಗೆ ಈ ನೀರನು ಫ್ಲೋರ್ಡ್ ಮಾಡುವ ವಿಧಾನ ಏನಾದರೂ ಇದ್ದರೆ ಆದನ್ನು ಈ ನೇತ್ರಾವತಿ ಹೊಳೆಯ ನೀರಿಗೆ ಆಳವಡಿಸಿದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ. ಇಲ್ಲಿಲ್ಲದಿದ್ದರೆ ಈಹಸ್ಮೆರ್ಸ್ಟಿ ಎಂಬುದುದಕ್ಷಿಣ ಕನ್ನಡ ದಲ್ಲಿ ಇರದದ್ದು ಬಂದೇ ಬರುತ್ತದೆ. ಅದೇರೀತಿ ಈ ಸ್ಥಾಪನೆ ಮಾಡಿದಂತಹ ಪಂಪ್‌ಸೆಟ್ಟುಗಳನ್ನು ತೆಗೆದರೆಅಕ್ಕೆ ಮೊದಲಾದ ಪದಾರ್ಥಗಳುಅಲ್ಲಿ ಬೆಳೆಯುದೆ. ಬರಗಾಲ ಬರುವ ಸಂದರ್ಭ ಇದೆ. ಆದ್ದರಿಂದ ಈಗ ಕುಪೂರ್ಥಾರ ಮತ್ತು ಒಂಟ್ಟಾಳದ ಕಡೆ ಇರುವ ಪಂಪ್‌ಸೆಟ್ಟುಗಳಿಗೆ ಎನು ತೊಂದರೆ ಬರುತ್ತದೆ, ಅದನ್ನು ಸರ್ಕಾರದವರು ಗಮನಿಸಿ, ರೈತರಿಗೆ ತೊಂದರೆಯಾಗದ ಹಾಗೆ ಮಾಡಬೇಕೆಂದು ಕಳಕಳಿಯಿದ ಅರಿಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ಇಡೀ ರೈತರ ಕುಟುಂಬದ ಪ್ರಶ್ನೆಯಾಗಿದೆ. ರೈತರೆಂದರೆ ದೇವತಾ ಮನುಷ್ಯರು. ಅವರು ಸ್ಟ್ರೈಕ್ ಇತ್ಯಾದಿ ಮಾಡುವ ಮನುಷ್ಯರಲ್ಲ. ನಾವು ಏ ಎಲ್ ಏ ಗಳು ಎನಾದರೂ ಅಲ್ಲಿಗೆ ಹೋದರೆ ಅವೆರ ಕುಂದುಕೂರತೆಗಳನ್ನು ಹೇಳಿಕೊಂಡು ಪರಿಹಾರ ಒದಗಿಸಿಕೊಡಬೇಕೆಂದು ನಮ್ಮಲ್ಲಿ ಕೇಳಿಕೊಳ್ಳುತ್ತಾರೆ ಇದನ್ನು ಸರ್ಕಾರ ಕೂಲಂಕುಷವಾಗಿ ಪರಿಶೀಲಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಅದೇ ರೀತಿ ರಸ್ತೆಗಳ ವಿಚಾರ. ನಿನ್ನೆ ಹುಚ್ಚುಮಾಸ್ತಿಗೌಡರು ಬರಗಾಲದ ಹಣವನ್ನು ರಸ್ತೆ ರಿಪೇರಿಗಳಿಗಾಗಿ ಖರ್ಚು ಮಾಡುತ್ತಿದ್ದಾರೆಂದು ಹೇಳಿದರು. ಅದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಪರಿಸ್ಥಿತಿಯೇ ಇಲ್ಲ ಅಲ್ಲಿ ಒಂದು ಮಳೆ ಹೊಡೆದರೆ, ಕಳೆದ ವರ್ಷ ಆ ರಸ್ತೆಗೆ ಒಂದು ೧೦ ಸಾವಿರ ರೂಪಾಯಿ ಖರ್ಚು ಮಾಡಿದ್ದರೂ, ಪ್ರಯೋಜನವಿಲ್ಲದ ಹಾಗೆ ಆಗುತ್ತದೆ ಮಳೆಯಿದ ಎಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇಲ್ಲದಿರುವುದರಿಂದ ಆಲ್ಲಿ ರಸ್ತೆಗಳ ಕೆಲಸಗಳಿಗಾಗಿ ಇಂತಹ ಹಣವನ್ನು ಒದಗಿಸುತ್ತಾ ಇಲ್ಲ. ಇದರಿಂದ ಅಲ್ಲಿಯ ರಸ್ತೆಗಳಿಗೆ ರಿಪೇರಿ ಮಾಡಲು ಯಾವ ಹಣವೂ ದೊರೆಯದೆ, ರಸ್ತೆಗಳು ತೀರಾ ಅಸಮಂಜಸವಾದ ರೀತಿಯಲ್ಲಿದೆ; ಮತ್ತು ಉತ್ಪಾದಾಯಕವಾಗಿರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಯವರು ನಮ್ಮ ಜಿಲ್ಲೆಯ ಹಳ್ಳಿಗಳಿಗೆ ಭೇಟಿಮಾಡಿ, ಅಲ್ಲಿಯ ಪರಿಸ್ಥಿತಿಯ ನ್ನೂ ಗಮನಿಸಿ ಅವುಗಳ ಸ್ಥಿತಿ ಹೇಗೆ ಇದೆಯೆಂಬುದನ್ನು ಕಣ್ಣಾರೆ ನೋಡಿ, ಪ್ರತಿಯೊಂದು ಕೆಡೆಗಳಲ್ಲಿಯೂ ಪಕ್ಕಾ ರಸ್ತೆಗಳಿರುವಂತೆ, ಅದನ್ನು ಸರಿಪಡಿಸಲು ಹಣ ಒದಗಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಇದರಿಂದ ರೈತರಿಗೂ ತಮ್ಮ ಸಾಮಾನುಗಳನ್ನು ಪೇಟೆಗೆ ತೆಗೆದುಕೊಂಡು ಹೋಗಲು ಮತ್ತು ತರಲು ಅನುಕೂಲವಾಗುತ್ತದೆ

ಇನ್ನು ಬಾವಿಗಳ ವಿಚಾರ ಹಳಿಯ ಮೈಸೂರಿನಲ್ಲಿ ಯಾವ ವಿಧಾನವಿದೆಯೆಂದರೆ, ಒಂದು ಹಳ್ಳಿಯಲ್ಲಿಮನೆಗಳು ಒಂದು ಗುಂಪಾಗಿ ಇರುತ್ತವೆ ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೆ ಇರುವುದಿಲ್ಲ. ಅಲ್ಲಿ ಬೇರೆ ಬೇರೆಯಾಗಿ ಇರುತ್ತವೆ. ಒಂದು ಬಾವಿ ಒಂದು ಕಡೆ ತೆಗೆದರೆ, ಅದರಿಂದಮುಂದು ಮೂರು ನಾಲ್ಕು ಮನೆಗಳಿಗೆ ಮಾತ್ರ ಅನುಕೂಲವಾಗುತ್ತದೆ. ಈಗ ಮಾನ್ಯ ಮಂಚೇಗೌಂಡರು ಹೇಳಿದಹಾಗೆ ಒಂದು ಹಳ್ಳಿಯಲ್ಲಿ ಈ ಒಂದು ವಿಲೇಜ ರಿಸ್ಟ್ರಿಕ್ಷನ್ ಇಟ್ಟಿದ್ದಾರೆ, ಅದನ್ನು ತೆಗೆಯಬೇಕೆಂದು ನಾನೂ ಒತ್ತಾಯ ಮಾಡುತ್ತೇನೆ ೨ ಒಂದು ವಿಲೇಜ ರಿಸ್ಟ್ರಿಕ್ಷನ್ಸ್ ಇಲ್ಲದೆ, ಕುಡಿಯುವ ನೀರು ಎಲ್ಲರಿಗೂ ದೊರೆಯುವಂತೆ ಮಾಡಬೇಕು ಆದ್ದರಿಂದ ಕೊನೆಯದಾಗಿ ಈ ನಾಲ್ಕು ಕೇಳಿಕೆಗಳನ್ನು ನೆರವೇರಿಸಿಕೊಡ ಬೇಕಾಗಿ ಕೇಳಿಕೊಳ್ಳುತ್ತೇನೆ. ಆದರಲ್ಲೂ ಈ ನೇತ್ರಾವತಿ ಹೊಳೆಯು ನೀರಿನ ಅಭಾವ ಏನಿದೆ, ಅದನು ತುರ್ತು ಆಗಿ ಕೆ ಗೊಳ್ಳಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನುಮುಗಿಸುತ್ತೇನೆ

ಶ್ರೀ ಎನ್. ಎ. ಚನ್ನೇಗೌಡ(ಪಾಂಡವಪುರ) :—

ಸನ್ಮಾನ್ಯ ಅಧ್ಯಕ್ಷರೇ, ಈ ಗಾಗಲೇ ಅಭಾವ ಪರಿಸ್ಥಿತಿಯ ಮೇಲೆ ಈ ಸದನದಲ್ಲಿ ಬಹಳ ವಿಪುಲವಾಗಿ ಚರ್ಚೆಯಾಗಿದೆ. ಹೆಚ್ಚಿನ ಸಲಹೆಗಳೇನೂ ಇಲ್ಲ. ನಾನು ಒಂದೆರಡು ಸಲಹೆಗಳನ್ನು ಮಾತ್ರ ಸರ್ಕಾರಕ್ಕೆ ಕೊಡಬಯಸುತ್ತೇನೆ. ಕಳೆದ ೫-೬ ವರ್ಷಗಳಿಂದಲೂ ಕೂಡ ಏಕಪ್ರಕಾರವಾಗಿ ಈ ಅಭಾವನಮ್ಮನ್ನು ಕಾಡುತ್ತಿದೆ. ಅಭಾವ ಪರಿಹರಕ್ಕೋಸ್ಕರ ಸರ್ಕಾರದವರೂ ಕೂಡ ಕೋಟ್ಯಾಂತರ ರೂಪಾಯಿಗಳೂ ಖರ್ಚು ಮಾಡಿದ್ದಾರೆ ಆದರೆ ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೊಂಡು ಸರ್ಕಾರದವರು ಏನಾದರೂ ಸಾಧಿಸಿದ್ದಾರೆಯೇ ಎಂದರೆ ಏನೂ ಇಲ್ಲ. ಸರ್ಕಾರದವರು ಯಾವರೀತಿಯಿಂದಲೇ ಹಣವನ್ನು ಖರ್ಚು ಮಾಡಿದರು. ಆದರಿಂದ ಯಾರಿಗೋ ಅನುಕೂಲ ಆಯಿತು. ಸರ್ಕಾರದವರು ಅಭಾವ ಪರಿಹಾರಕ್ಕೋಸ್ಕರ ಏನು ಹಣನ್ನು ಖರ್ಚು ಮಾಡಿದ್ದಾರೆ ಆದರಿಂದ ಸಾಮಾನ್ಯವಾಗಿ ಕಂಟ್ರಾಕ್ಟರಿಗೆ ಅನುಕೂಲವಾಗಿದೆ. ಅಭಾವ ಪರಿಹಾರಕ್ಕೋಸ್ಕರ ಆದರಿಂದ ಅನುಕೂಲವಾಗಿದೆ. ಕೆಲವು ಪುಡಾರಿಗಳಿಗೆ ಅನುಕೂಲವಾಗದೆ. ಅಭಾವ ಪರಿಹಾರಕ್ಕೋಸ್ಕರ ಹಣವನ್ನು ಹಂಚುವಾಗ ಸರ್ಕಾರದವರು ರಾಜಕೀಯ ದೃಷ್ಟಿಯಿಂದ ಅದನ್ನು ಹಂಚಿದಾರೆ ಕೆಲವು ತಾಲ್ಲೂಕುಗಳಿಗೆ ಲಕ್ಷಗಟ್ಟಲೇ ಹಣವನ್ನು ಖರ್ಚು ಮಾಡಿದ್ದಾರೆ. ಕೆಲವು ತಾಲ್ಲೂಕು ಗಳಲ್ಲಿ ಸಾವಿರ ರೂಪಾಯಿಗಳನ್ನು ಕೂಡ ಖರ್ಚ ಮಾಡಿಲ್ಲ. ನನ್ನ ಕ್ಷೇತ್ರಕ್ಕೆ ೬೦ ಸಾವಿರರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ೨೮ ಸಾವಿರ ರೂಪಾಯಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಈಗ ೬ ವರ್ಷಗಳಿಂದ ಪರಿಹಾರ ಕೆಲಸಗಳನ್ನೂ ಮಾಡಿ ಪುನಃ ಅಭಾವ ಪರಿಸ್ಥಿತಿ ಬರುತ್ತದೆ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಹೇಳಿದೆವುದು ನಾಚಿಕೆಗೇಡಿನ ಪ್ರಸಂಗ ಅಭಾವ ಪರಿಸ್ಥಿತಿ ಪುನಃ ಪುನಃ ಬರುತದೆ ಎನ್ನುವುದನ್ನು ಸರ್ಕಾರದವರು ತಿಳಿದುಕೊಳ್ಳಬೇಕು ಅಭಾವ ಪರಿಸ್ಥಿತಿಯ ವೇಳದಲ್ಲಿ ಜನಗಳಿಗೆ ಕೊಳ್ಳುವ ಶಕ್ತಿಯನ್ನುತುಂಬಬೇಕು ಎಂದು ಕೆಲಸಗಳನ್ನು ಮಾಡಿಸುವುದು ಸರಿಯಲ್ಲ. ಕೊಳ್ಳುವ ಶಕ್ತಿಯನ್ನು ಜನಗಳಿಗೆ ತಾತ್ಕಾಲಿಕವಾಗಿ ಉಂಟುಮಾಡಿದರೆ ಅದರಿಂದ ಪ್ರಯೋಜನವಾಗುದಿಲ್ಲ. ತಾತ್ಕಾಲಿಕವಾದ ಪರಿಹಾರ ಎಂದರೆ ಕುಡಿಯುವ ನೀರನ್ನು ಒದಗಿಸಬೇಕು, ರಸ್ತೆಗಳನ್ನು ಮಾಡಿಸಬೇಕು ಎಂದು ಪರಿಹಾರ ಕಾಮಗಾರಿಗಳ ಮೂಲಕ ತಾವು ಈ ಕೆಲಸಗಳನ್ನು ಮಾಡಿಸುತ್ತೀದ್ದಾರೆ. ಇದು ಅಷ್ಟು ಸಮಂಜಸವಲ್ಲ. ಅಭಾವ ಇಲ್ಲಿ ಪ್ರತಿಯೊಬ್ಬ ಪ್ರಜೆಗೂ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ ಆದ. ಕರ್ತವ್ಯ ಎಂದು ನಾನು ಒತ್ತಿಹೇಳುತ್ತೇನೆ ಯಾವಾಗ ಅಭಾವ ಬರುತ್ತದೆಯೋ ಆಗಾಗ ಸರ್ಕಾರದವರು ಬಾವಿಗಳನ್ನು ತೆಗೆದು ಇದ್ದ ಬಾವಿಗಳನ್ನು ಆಳ ಮಾಡುವುದು ಇತ್ಯಾದಿ ಕೆಲಸಗಳಿಗಾಗಿ ಹಣವನ್ನೇನೋ ಖರ್ಚು ಮಾಡಿದ್ದಾರೆ ಕೆಲವು ಕಡೆ ನೀರು ಬಂದಿದೆ. ಆದರೂ ಸಹ ಸಕಾಲದಲ್ಲಿ ಬಾವಿಗಳಲ್ಲಿ ನೀರು ಇರುವುದಿಲ್ಲ. ಅಭಾವ ಬಂದಾಗ ಇದ್ದ ಬಾವಿಗಳನು ಆಳ ಮಾಡಿದರೆ ನೀರು ಬರುತ್ತದೆಯೇ? ಖಂಡಿತ ನೀರು ಬರುವುದಿಲ್ಲ. ಇಂಥಾ ಕೆಲಸಗಳಿಗೆ ಹಣವನ್ನು ಖರ್ಚು ಮಾಡತಕ್ಕ ಮಾಡಿ ಸರ್ವಜನಿಕ ಹಣವನ್ನು ದುರ್ವ್ಯಯ ಮಾಡುವುದು ಬೇಡಿ. ಸರ್ಕಾರದವರು ಖರ್ಚು ಮಾಡತಕ್ಕ ಪ್ರತಿಯೊಂದು ಕಾಸೂ ಕೂಡ ಸದ್ವಿನಿಯೋಗವಾಗಬೇಕು. ಸರ್ಕಾರದವರು ಅಭಾವ ಪರಿಹಾರಕ್ಕೋಸ್ಕರ ಹಣವನ್ನು ಖರ್ಚು ಮಾಡುವಾಗ ಆದರಿಂದ ಜನತೆಗೆ ಎಷ್ಟುರಮಟ್ಟಿಗೆ ಪರಿಹಾರ ದೊರಕಿದೆ ಎಂಬುದನ್ನು ನಾವು ನೊಡುವುದಾದರೆ ಅಭಾವ ಪೀಡಿತ ಪ್ರದೇಶಗಳಲ್ಲಿ ಇವೊತ್ತಿನ ದಿವಸ ಕೊಂಚವು ಕೂಡ ಪ್ರಜೆಗಳಿಗೆ ಅನುಕೂಲವಾಗಿಲ್ಲ ಎಂದು ನಾನು ಒಹಳ ವಿಷಾದದಿರದ ಹೇಳಬೇಕಾಗಿದೆ ಮಾನ್ಯರೆವಿನ್ಯೂ ಮಂತ್ರಿಗಳು ಒಳ್ಳೆಯ ಮನುಷ್ಯರು ಅವರಲ್ಲಿ ನನಗೆ ಅಘಾದವಾದ ಗೌರವ ಇದೆ. ಬಡವರನ್ನು ಕಂಡರೆ ಕನಿಕರ ಇದೆ. ಆದರೆ ಆವರ ಕೈಕೆಳಗಿರತಕ್ಕ ಅಧಿಕಾರಿಗಳು ಅಷ್ಟೇ ಒಳ್ಳೆಯ ದೃಷ್ಟಿಯಿಂದ ಕೆಲಸಗಳನ್ನು ಕೈಗೊಳ್ಳುತ್ತಾ ಇಲ್ಲ. ಮಂತ್ರಿಗಳು ಹೇಳುತ್ತಾರೆ ನಾವು ಸ್ವರಾಜ್ಯವನ್ನು ಸ್ಥಾಪನೆ ಮಾಡುತ್ತೆವೆ ಎಂದು ಆದರೆ ಈಗ ನಮ್ಮ ರಾಜ್ಯದಲ್ಲಿ ಅಧಿಕಾರಿಗಳ ರಾಜ್ಯ ಬಂದಿದೆ, ಯಾವುದೇ ಕೆಲಸಗಳು ಆಗದ ಹಾಗೆ ಮಾಡುತ್ತಾರೆ. ಪ್ರತಿಯೊಂದಕ್ಕೂ ಅಡ್ಡಿಯನ್ನು ತಂದೊಡ್ಡುತ್ತಿದ್ದಾರೆ. ಇದು ಅವರ ಕರ್ತವ್ಯ ಆಗಿದೆ. ಈಗ ಮಳೆ ಬಂದಿದೆ ಅಭಾವ ಪರಿಹಾರ ಕೆಲಸಗಳನ್ನು ನಿಲ್ಲಿಸೋಣ ಎಂದು ಹೇಳುತಾರೆ. ಆರೀತಿ ಆ ಕೆಲಸಗಳನ್ನು ನಿಲ್ಲಿಸಿದರೆ ಜನಗಳಿಗೆ ಕೊಳು ವ ಶಕ್ತಿಯನ್ನು ಉಂಟು ಮಾಡಿದಹಾಗೆ ಆಗುವುದಿಲ್ಲ. ಜನಗಳಿಗೆ ಕೊಳ್ಳುವ ಶಕ್ತಿ ಬರುವವರೆಗೂ ಪರಿಹಾರ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಬೇಕು ಅದಕ್ಕೋಸ್ಕರವಾಗಿ ಶಾಶ್ವತವಾದ ಕೆಲಸಗಳನ್ನು ಮಾಡಿಸಬೇಕು, ದೊಡ್ಡ ದೊಡ್ಡ ಕೆರೆ ಮತ್ತು ಕಾಲುವೆ ಕೆಲಸಗಳನು ತೆಗೆದುಕೊಂಡು ಮಾಡಿಸಬೇಕು. ಎಲ್ಲವನ್ನು ಒಂದೇ ಸಾರಿ ಮಾಡುವುದಕ್ಕಾ ಗುವುದಿಲ್ಲ. ಕ್ರಮವಾಗಿ ಒಂದೊಂದು ಕೆಲಸವನ್ನು ತೆಗೆದುಕೊಂಡು ಮಾಡಬೇಕು. ತಾವು ಮಾಡತಕ್ಕ ಕೆಲಸ ಶಾಶ್ವತವಾಗಿ ಉಳಿದುಕೊಳ್ಳಬೇಕು ಆ ರೀತಿ ಕೆಲಸಗಳನ್ನು ಮಾಡಬೇಕು. ಎಂದೂ ಕೂಡ ಈ ದೇಶದಲ್ಲಿ ಅಭಾವ ಬರಕೂಡದು ಆದೃಷ್ಟಿಯಿಂದ ಕೆಲಸಗಳನ್ನು ಮಾಡಬೇಕು ಮಳೆ ಹೋದರೂ ಇಂತಿಂಥಾ ಬೆಳೆಗಳನ್ನು ಬೆಳೆಯಬಹುದು ಎಂದು ಹೇಳಿ ಕ್ರಾಪ್ ಪ್ಯಾಟ್ರನ್ ನಿಷ್ಕರ್ಷೆ ಮಾಡಬೇಕು. ಮಳೆ ಬರುವುದಿಲ್ಲ ಎನ್ನುವ ಮುನ್ಸೂಚನೆಯನ್ನು ಅರಿತುಕೊಂಡು ಆದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ಒಳ್ಳೆಯ ಬೆಳೆಯ ತಳಿಗಳನ್ನೂ ಕೂಡ ರೈತರಿಗೆ ಒದಗಿಸಿ ಕೊಟ್ಟು ಆ ಬೆಳೆಗಳನ್ನು ಬೆಳೆಯುವುದಕ್ಕೆ ಒಂದು ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕು. ವ್ಯವಸಾಯ ಒಂದರಿಂದಲೇ ಜನತೆಗೆ

ಕೊಳ್ಳುವ ಶಕ್ತಿ ಬರುವುದಿಲ್ಲ. ಅಭಾವ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರವನ್ನು ಹುಡುಕಬೇಕಾದರೆ ವ್ಯವಸಾಯಗಾರರಿಗೆ ಉಪಕಸುಬುಗಳನ್ನು ಒದಗಿಸಬೇಕು. ಆಗ ಜನಗಳಿಗೆ ಶಾಶ್ವತವಾಗಿ ಕೊಳ್ಳುವ ಶಕ್ತಿ ಬರುತ್ತದೆ. ಸರಿಯಾಗಿ ಮಳೆ ಬೆಳೆಗಳು ಆಗದೇ ಇರುವಂತಹ ಪ್ರದೇಶಗಳಲ್ಲಿ ಜನಗಳಿಗೆ ಉಪಕಸುಬನ್ನು ಒದಗಿಸಿಕೊಡಬೇಕು. ಪರಿಹಾರ ಕಾಮಗಾರಿಗಳನ್ನು ಕೊಡುವಾಗ ಎಲ್ಲಾ ಪ್ರದೇಶಗಳಿಗೂ ಹಂಚಬೇಕು. ಒಂದೊಂದು ಪಂಚಾಯಿತಿಗೂ ಒಂದೊಂದು ಕೆಲಸ ಸಿಕ್ಕುವಂತೆ ಪರಿಹಾರ ಕೆಲಸಗಳನ್ನು ಹಂಚಬೆಕು. ಇಡೀ ಒಂದು ತಾಲ್ಲೂಕಿಗೆ ೬೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಒಂದು ಹಳ್ಳಿಗೆ ೭೫ ರೂಪಾಯಿಗಳ ಕೆಲಸ ಸಿಕ್ಕುತ್ತದೆ. ಇದರಿಂದ ಜನಗಳಿಗೆ ಯಾವ ಅನುಕೂಲವೂ ಆಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ರಾಗಿ ಮುದ್ದನ ಹಳ್ಳಿ ಎಂಬ ಗ್ರಾಮದಲ್ಲಿ ಎರಡೂವರೆಸಾವಿರ ಜನಗಳು ಇದ್ದಾರೆ. ಅಲ್ಲಿ ೩೪ ಸ್ವಂತ ಬಾವಿಗಳು ಇವೆ. ಸರ್ಕಾರದ ಬಾವಿಗಳು ಎರಡು ಇವೆ, ಆದರೆ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಈ ವಿಚಾರವನ್ನು ನಾನು ಪತ್ರಿಕಾ ಪ್ರತಿನಿಧಿಗಳಿಗೂ ಕೂಡ ಹೇಳಿದ್ದೇನೆ. ಜನಗಳು ಊರಿನಿಂದ ೪-೫ ಮೈಲಿ ದೂರ ಹೋಗಿ ಕುಡಿಯುವುದಕ್ಕೆ ನೀರನ್ನು ತರಬೇಕು. ಬಟ್ಟೆ ಒಗೆಯುವುದು ಜನಗಳಿಗೆ ಬಹಳ ಕಷ್ಟವಾಗಿದೆ. ಆದ್ದರಿಂದ ಸುಮಾರು ೧೦-೨೦ ದಿವಸಗಳವರೆವಿಗೂ ಇದ್ದ ಬಟ್ಟೆಯನ್ನೇ ಹಾಕಿಕೊಳ್ಳುತಕ್ಕ ಪರಿಸ್ಥಿತಿ ಇದೆ. ಕಾರಣ ನೀರು ಇಲ್ಲದೇ ಇರುವುದರಿಂದ. ನಮ್ಮ ತಾಲ್ಲೂಕಿನಲ್ಲಿ ಅರಿಶಿನ ಕಾಮಾಲೆ ರೋಗ ಬಂದು ೩ ದಿವಸಗಳಲ್ಲಿ ಸುಮಾರು ೧೫೦ ಜನಗಳಿಗೆ ಈ ಖಾಯಿಲೆ ಅಂಟಿಕೊಂಡು ಸಕಾಲದಲ್ಲಿ ಅವರಿಗೆ ಔಷಧೋಪಚಾರವನ್ನು ಒದಗಿಸಲಿಲ್ಲ. ಈ ವಿಚಾರದಲ್ಲಿ ಅಧಿಕಾರಿಗಳ ಕರ್ತವ್ಯ ಭ್ರಷ್ಟತೆ ಎಂದು ಹೇಳದೆ ವಿಧಿಯಿಲ್ಲ. ಮಲ್ಲಿಗೆರೆ ಗ್ರಾಮದವರು ಬಟ್ಟೆಯನ್ನು ತೊಳೆಯಬೇಕಾದರೆ ೮ ಮೈಲಿ ದೂರ ಹೋಗಬೇಕು. ಹೀಗಿರುವಾಗ ನಮ್ಮ ಮಂತ್ರಿಗಳು ಕೆಲವರು ಸುಖಲೋಲುಪ್ತರಾಗಿದ್ದಾರೆ. ಇವರಿಗೆ ಜನಗಳ ಕಷ್ಟ ಹೇಗೆ ಅರ್ಥವಾಗುತ್ತದೆ? ಕಷ್ಟದಲ್ಲಿರುವಂತಹ ಹಳ್ಳಿಗಳಿಗೆ ಹೋಗಿ ಮಂತ್ರಿಗಳು ನೋಡಬೇಕು. ಆದ್ದರಿಂದ ನಾನು ತಮ್ಮಲ್ಲಿ ಕೋಳಿಕೊಳ್ಳುವುದು ಇಷ್ಟೆ, ಅಭಾವ ಪರಿಹಾರ ಕಾಮಗಾರಿಗಳನ್ನೇನು ಮಾಡಿಸುತ್ತೀರಿ ಅವು ಶಾಶ್ವತವಾಗಿ ಉಳಿದುಕೊಳ್ಳುವಂತೆ ಮಾಡಿ. ಕೆರೆಗಳ ಡೀಸಿಟ್ ಮಾಡುವುದಕ್ಕೆ, ರಸ್ತೆಗಳನ್ನು ಮಾಡಿಸುವುದಕ್ಕೆ ಮುಂತಾದ ಕೆಲಸಗಳಿಗೆ ಹಣವನ್ನು ವ್ಯಯ ಮಾಡತಕ್ಕ ಅಪಚಾರವನ್ನು ಖಂಡಿತಾ ಮಾಡಬೇಡಿ. ತಮ್ಮ ಅಧಿಕಾರಾವಧಿಯಲ್ಲಿ ಜನಗಳಿಗೆ ತೊಂದರೆಯಾಯಿತು ಎನ್ನುವ ಮನೋಭಾವ ಇರಬಾರದು. ತಾವು ಖರ್ಚು ಮಾಡತಕ್ಕಂಥ ಪ್ರತಿಯೊಂದು ಕಾಸೂ ಕೂಡ ಸದ್ವಿನಿಯೋಗವಾಗಬೇಕು ಆ ರೀತಿ ವ್ಯವಸ್ಥೆ ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನೆ ನನ್ನ ಮಾತನ್ನು ಮುಗಿಸುತ್ತೇನೆ.

[MR. CHAIRMAN :— (SRI D. M. SIDDIAH) in the Chair]

† ಶ್ರೀ ಪಂಜಯ್ಯನಮಠ :— (ಹುನುಗುಂದ್)

ಸನ್ಮಾನ್ಯ ಅಧ್ಯಕ್ಷರೇ, ಈಗ ನಿನ್ನೆಯಿಂದ ಇಷ್ಟು ಹೊತ್ತಿನವರೆಗೂ ಸರ್ವೇ ಸಾಮಾನ್ಯವಾಗಿ ಈ ಸಭಾ ಮಂದಿರದಲ್ಲಿ ಎರಡು ಪಕ್ಷದ ಮಾನ್ಯ ಸದಸ್ಯರೂ ಕೂಡ ರಾಜ್ಯದಲ್ಲಿ ಉಂಟಾಗಿರತಕ್ಕ ಬರಗಾಲ ಪರಿಸ್ಥಿತಿಯ ಬಗ್ಗೆ ಮತ್ತು ಅದರ ಪರಿಹಾರ ವಿಧಾನಗಳ ಬಗ್ಗೆ ಸ್ವಾರಸ್ಯವಾಗಿ ಕೆಲವೊಂದು ವಿಚಾರವನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಈಗ ನಾನು ಪ್ರತಿನಿಧಿಸುವ ಹುನುಗುಂದ್ ಕ್ಷೇತ್ರದ ಬಗ್ಗೆ ಹಾಗೂ ಬಿಜಾಪುರ ಜಿಲ್ಲೆಯ ಬಗ್ಗೆ ಕೆಲವೊಂದು ವಿಚಾರಗಳನ್ನು ಈ ಸಭೆಯ ಅವಗಾಹನೆಗೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿರುವ ಗೋಳಗುಮ್ಮಟ, ಐಹೊಳೆ, ಪಟ್ಟದಕಲ್ಲು ಬಾದಾಮಿ ಈ ಸ್ಥಳಗಳು ಇಡೀ ಭರತ ಖಂಡದಲ್ಲೇ ಪ್ರಸಿದ್ಧಿಯನ್ನು ಪಡೆದಿವೆ. ಬಿಜಾಪುರ ಜಿಲ್ಲೆ ಬರಗಾಲ ಪೀಡಿತ ಪ್ರದೇಶವೆಂದು ಪ್ರಸಿದ್ಧಿಪಡೆದಿದೆ

MR. CHAIRMAN :— House will now rise and meet again tomorrow at 1 P. M.

The House adjourned at Six of the Clock to meet again at One of the clock on Wednesday, the 14th October 1970.

W.D. 15503—550—29-12-1970.